ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 50 | ಡಿಸೆಂಬರ್ 13, 1981 | ಬೆಲೆ : 60 ಪೈಸೆ

ಬಹಿರಂಗ ಸಭೆ

ದಿನಾಂಕ ೧೪-೧೨-೮೧ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಸಾಯಂಕಾಲ ೬ ಘಂಟೆಗೆ ರಾಜ್ಯಸಮ್ಮೇಳನದ ಅಂಗವಾಗಿ ಬಹಿರಂಗ ಸಭೆ ನಡೆಯಲಿದೆ.

ಸಭೆಯನ್ನುದ್ದೇಶಿಸಿ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್ ಅವರು ಮಾತನಾಡಲಿರುವರು.

ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳಿ.

ಸ್ವಾಗತ ಸಮಿತಿ

ಕೇರಳ : ಚುನಾವಣೆಯೊಂದೇ ಮಾರ್ಗ

ಕೇರಳದ ಎಡ-ಪ್ರಜಾಪ್ರಭುತ್ವವಾದೀ ರಂಗದಿಂದ ಹೊರಬಂದ ಮೇಲೆ ಅಕ್ಟೋಬರ್ 15ರಂದು ಹಾಗೂ ನವೆಂಬರ್ 22ರಂದು ಕಾಂಗ್ರೆಸ್ (ಎಸ್)ನ ಕೇರಳ ಘಟಕ ಅಂಗೀಕರಿಸಿದ ಠರಾವುಗಳು ದೇಶದಲ್ಲಿನ ಸರ್ವಾಧಿಕಾರೀ ವಿರೋಧಿ ಶಕ್ತಿಗಳು ಒಟ್ಟುಗೂಡುತ್ತಿದ್ದ ಕಾಲದಲ್ಲಿ ಒಂದು ದೊಡ್ಡ ಆಘಾತವಾಗಿ ಬಂದಿತ್ತು. ಕಾಂಗ್ರೆಸ್ ಒಡೆದು ಕಾಂಗ್ರೆಸ್ (ಐ) ಹಾಗೂ ಕಾಂಗ್ರೆಸ್ (ಎಸ್) ಎಂದಾಗುವ ಮೊದಲೇ ಕೇರಳದ ಈ ಘಟಕ ಒಂದು ಪ್ರಮುಖ ಸರ್ವಾಧಿಕಾರಿ ವಿರೋಧಿ ಶಕ್ತಿಯಾಗಿ ಮೂಡಿಬಂದಿದ್ದನ್ನು ನೆನಪಿಸಿಕೊಂಡರೆ ಇದು ಸರ್ವಾಧಿಕಾರೀ ವಿರೋಧಿ ಚಳುವಳಿಗೆ ಎಂತಹ ತೀವ್ರ ಹೊಡೆತ ಎಂಬುದು ಸ್ಪಷ್ಟವಾಗುತ್ತದೆ. ಇದೀಗ ಕಾಂಗ್ರೆಸ್ (ಎಸ್)ನ ಕಾರ್ಯಕಾರೀ ಸಮಿತಿಯ ನವೆಂಬರ್ 29ರ ನಿರ್ಧಾರ ದೇಶದ ಪ್ರಜಾಪ್ರಭುತ್ವವಾದೀ ಶಕ್ತಿಗಳಲ್ಲಿ ಉಂಟಾಗಿದ್ದ ಈ ತೀವ್ರ ಕಳವಳವನ್ನು ನಿವಾರಿಸಿದೆ. ಸ್ವಾಭಾವಿಕವಾಗಿಯೇ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಕಾಂಗ್ರೆಸ್ (ಎಸ್)ನ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಅಷ್ಟೇ ಸ್ವಾಭಾವಿಕವಾಗಿ ಕಾಂಗ್ರೆಸ್ (ಐ) ಹಾಗೂ ಕಾಂಗ್ರೆಸ್ (ಎಸ್)ನ ಕೇರಳ ಘಟಕದ ಕೆಲವರಿಗೆ ಇದರಿಂದ ನಿರಾಶೆಯಾಗಿದೆ.

ಆಗಲೇ ಕೇರಳ ಕಾಂಗ್ರೆಸ್ (ಎಸ್)ನ ಒಬ್ಬ ನಾಯಕರಾದ ವಯಲಾರ್ ರವಿಯವರು ತನ್ನ ಪಕ್ಷದ ರಾಷ್ಟ್ರೀಯ ನಾಯಕತ್ವದ ಆದೇಶದ ಉಲ್ಲಂಘಿಸುವ ಸೂಚನೆಯನ್ನು ತನ್ನ ಹೇಳಿಕೆಗಳ ಮೂಲಕ ಇತ್ತಿದ್ದಾರೆ.

ಕಾಂಗ್ರೆಸ್ (ಎಸ್)ನ ಕೇರಳ ಘಟಕ ಕಾಂಗ್ರೆಸ್ (ಐ)ನೊಂದಿಗೆ ಸೇರಿ ಸರಕಾರ ರಚಿಸುವ ಅನುಮತಿಕೋರುವ ತನ್ನ ನಿರ್ಣಯದಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿ (ಎಸ್)ನ ಮುಂಬೈ ಅಧಿವೇಶನದ ಠರಾವಿನಲ್ಲಿನ "ವಿಶೇಷ ಪರಿಸ್ಥಿತಿ" ಎಂಬ ಪದಗುಚ್ಛದ ಮೊರೆ ಹೋಗಿತ್ತು. ಕೇರಳದಲ್ಲಿ ಒಂದು ವಿಶೇಷ ಪರಿಸ್ಥಿತಿ ಇದೆಯೆಂಬುದು ಅಪಕ ವಾದ. ಆದರೆ ಕಾಂಗ್ರೆಸ್ (ಎಸ್) ನಾಯಕರು ಇದನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ. ಹಾಗೂ ಈ ನಿಲುವೇ ಪಕ್ಷ ಕೇರಳದ ಎಡಪ್ರಜಾಪ್ರಭುತ್ವ ರಂಗವನ್ನು ಸೇರಿದಾಗ ಇದ್ದ ಮೂಲಭೂತ ದೃಷ್ಟಿಕೋನವನ್ನೇ ತಲೆಕೆಳಗು ಮಾಡಿದೆಯೆಂದು ಅವರು ತಮ್ಮ ನಿರ್ಣಯದ ಮೂಲಕ ಒಪ್ಪಿಕೊಂಡಿದ್ದಾರೆ.

ಇದರ ಜೊತೆಗೇ ಕಾಂಗ್ರೆಸ್ (ಎಸ್) ಕಾರ್ಯಕಾರೀ ಸಮಿತಿ ಕೇರಳದ ಎಡ-ಪ್ರಜಾಪ್ರಭುತ್ವವಾದೀ ಸರಕಾರ ಪತನಕ್ಕೆ ಸಿ. ಪಿ. ಐ. (ಎಂ) ಕಾರಣ ಎಂಬ ತನ್ನ ಹಳೆಯ ಆಪಾದನೆಯನ್ನು ಪುನರುಚ್ಚರಿಸಿದೆ. ಆದರೆ ಕೇರಳದ ಎಡಪ್ರಜಾಪ್ರಭುತ್ವರಂಗ ಸ್ಥಾಪಿತವಾದಂದಿನಿಂದ ಅದನ್ನು ವಿರೋಧಿಸುತ್ತಿದ್ದ ಒಂದು ಗುಂಪು ಕಾಂಗ್ರೆಸ್ (ಎಸ್)ನ ಕೇರಳ ಘಟಕದಲ್ಲಿ ಇತ್ತು ಎಂಬ ನಿಜಸಂಗತಿಯನ್ನು ಇದು ಮರೆಮಾಡುತ್ತದೆ. ಕಾಂಗ್ರೆಸ್ (ಎಸ್)ನ ರಾಷ್ಟ್ರೀಯ ನಾಯಕತ್ವ ಈ ರೀತಿ ಹೇಳುತ್ತಾ ಇರುವ ಬದಲು ತನ್ನ ಪಕ್ಷವನ್ನು ಸರಿಪಡಿಸಿಕೊಳ್ಳುವ ಕಡೆಗೆ ಗಮನಹರಿಸಬೇಕು.

ಇತ್ತ ಎಡ-ಪ್ರಜಾಪ್ರಭುತ್ವ ರಂಗದ ನಾಯಕರುಗಳು ಕೇರಳಾದ್ಯಂತ ಜನರನ್ನು ಭೇಟಿಯಾಗುತ್ತಿದ್ದಾರೆ. ಬಹಿರಂಗ ಸಭೆಗಳು ನಡೆಯುತ್ತಿವೆ. ಈ ಎಲ್ಲಾ ಸಭೆ ಮೆರವಣಿಗೆಗಳಲ್ಲಿ ಜನ ಭಾರೀ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ; ಎಡಪ್ರಜಾಪ್ರಭುತ್ವ ರಂಗದ ಬಗೆಗಿರುವ ತಮ್ಮ ಅಭಿಮಾನ ಹಾಗೂ ಬೆಂಬಲವನ್ನು ಎಲ್ಲರಿಗೂ ಸ್ಪಷ್ಟವಾಗುವಂತೆ ಸೂಚಿಸುತ್ತಿದ್ದಾರೆ. ಆದ್ದರಿಂದ ಕೇರಳದಲ್ಲಿ ಬದಲೀ ಸರಕಾರ ರಚಿಸಲು ಶತಪ್ರಯತ್ನ ನಡೆಸುತ್ತಿರುವ ಕಾಂಗ್ರೆಸ್ (ಐ) ಕಾಂಗ್ರೆಸ್ (ಎಸ್) ಹಾಗೂ ಕೇರಳ ಕಾಂಗ್ರೆಸ್‌ನವರ ಹಾಗೂ ಕಾಂಗ್ರೆಸ್ (ಐ) ಮತ್ತು ಸಿ. ಪಿ. ಐ. (ಎಂ) ಎರಡೂ ನಾಯಕತ್ವದಲ್ಲಿಲ್ಲದ ಸರಕಾರಕ್ಕೆ ಬೆಂಬಲ ಕೊಡುತ್ತೇವೆಂಬ ಎಡಬಿಡಂಗಿ ನೀತಿಯನ್ನು ಅನುಸರಿಸುತ್ತಿರುವ ಜನತಾಪಕ್ಷದ ಕೇರಳ ಘಟಕದ ಕುರಿತು ಜನತೆ ತೀರ್ಪುಕೊಡಲು ಅವಕಾಶ ಮಾಡಿಕೊಡಬೇಕು.

ಈ ಗೊಂದಲಮಯ ಪರಿಸ್ಥಿತಿಯಲ್ಲಿ ಮತ್ತೆ ಚುನಾವಣೆ ನಡೆಸದೇ ಕಾಂಗೈಗೆ ಸರಕಾರ ರಚಿಸಲು ಅನುವಾಗುವಂತೆ ರಾಜ್ಯಪಾಲರ ಆಡಳಿತ ಹೇರಲಾಗಿದೆ.

ಜನತೆ ತಮ್ಮ ತೀರ್ಪನ್ನು ಕೊಡಲು ಅವಕಾಶ ಮಾಡಿಕೊಡಬೇಕು, ರಾಜ್ಯದಲ್ಲಿ ಕೂಡಲೇ ಚುನಾವಣೆ ನಡೆಸಬೇಕೆಂದು ಸಿ. ಪಿ. ಐ. (ಎಂ) ಮತ್ತೆ ಒತ್ತಾಯ ಮಾಡುತ್ತದೆ.

ಕಾಂಗೈ ನೇತೃತ್ವದ ಸರಕಾರವನ್ನು ಕೇರಳ ಜನತೆಯ ಮೇಲೆ ಹೇರಲೆತ್ನಿಸಿದರೆ ತೀವ್ರ ಹೋರಾಟಕ್ಕಿಳಿಯಬೇಕಾದೀತೆಂಬ ಎಚ್ಚರಿಕೆಯನ್ನು ಎಡ-ಪ್ರಜಾಪ್ರಭುತ್ವರಂಗ ನೀಡಿದೆ.

ಕೇಂದ್ರ ಸಮಿತಿಯ ನಿರ್ಣಯಗಳು

ಜನವರಿ ೧೯ರಂದು ರಾಷ್ಟ್ರವ್ಯಾಪಿ ಮುಷ್ಕರ

ನವೆಂಬರ್ 23ರಂದು ನಡೆದ ಐತಿಹಾಸಿಕ "ಪಾರ್ಲಿಮೆಂಟ್ ಚಲೋ" ಕಾರ್ಯಕ್ರಮವನ್ನು ಅದ್ಭುತ ಯಶಸ್ವಿಗೊಳಿಸಿದ್ದಕ್ಕಾಗಿ ದೇಶದ ಕಾರ್ಮಿಕವರ್ಗವನ್ನು, ಕಾರ್ಯಕ್ರಮ ರೂಪಿಸಿದ ರಾಷ್ಟ್ರೀಯ ಆಂದೋಲನ ಸಮಿತಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಅಭಿನಂದಿಸಿದೆ. ಮತ್ತು ಜನವರಿ 19ರಂದು ಒಂದು ದಿನ ರಾಷ್ಟ್ರವ್ಯಾಪೀ ಮುಷ್ಕರಕ್ಕೆ ತೀರ್ಮಾನಿಸಿರುವುದನ್ನು ಸ್ವಾಗತಿಸಿದೆ.

ನವೆಂಬರ್ 23ರಂದು ನಡೆದ ಪ್ರಚಂಡ ರ್‍ಯಾಲಿ ಮತ್ತು ಜ. 19ರಂದು ನಡೆಯಲಿರುವ ಮುಷ್ಕರ ಇವೆಲ್ಲ ದೇಶದ ಕಾರ್ಮಿಕವರ್ಗದ ಒಗ್ಗಟ್ಟು ಹೆಚ್ಚುತ್ತಲಿರುವುದರ ಸಂಕೇತವಾಗಿದೆ. ಸರ್ವಾಧಿಕಾರವನ್ನು ಎದುರಿಸುವಲ್ಲಿ ಕಾರ್ಮಿಕವರ್ಗ ತನ್ನ ಐತಿಹಾಸಿಕ ಪಾತ್ರ ನಿರ್ವಹಿಸುವಲ್ಲಿ ಮುನ್ನಡೆಯುತ್ತಿದೆ.

ಕಾಂಗೈ ಸರಕಾರದ ಕಾರ್ಮಿಕ ವಿರೋಧಿ ನೀತಿ, ಜನವಿರೋಧಿ ಶಾಸನಗಳಾದ ಎನ್.ಎಸ್.ಎ. ಮತ್ತು ಎಸ್ಮಾ (ಅಗತ್ಯ ಸೇವಾ ಕಾನೂನು), ಟ್ರೇಡ್‌ಯೂನಿಯನ್ ಚಳುವಳಿಯ ಮೇಲೆ ದಬ್ಬಾಳಿಕೆ, ಬೋನಸ್ ಮತ್ತು ತುಟ್ಟಿಭತ್ತೆ ತಡೆಹಿಡಿಯುವದರ ಕುರಿತ ಎಲ್ಲ ಕಾರ್ಮಿಕ ಸಂಘಟನೆಗಳು ಸಂಯುಕ್ತವಾಗಿ ಹೋರಾಡುತ್ತಿವೆ. ಸರಕಾರದ ಬಾಲಬಡುಕ ಸಂಘಟನೆ ಇಂಟಕ್ (ಐ) ಮಾತ್ರ ಈ ಜಂಟೀ ಹೋರಾಟಗಳಲ್ಲಿ ಪಾಲ್ಗೊಂಡಿಲ್ಲ.

ದೇಶದ ಅರ್ಥವ್ಯವಸ್ಥೆಯನ್ನು ಒತ್ತೆಯಿಡುವ ಐ.ಎಂ.ಎಫ್. ಸಾಲದ ಒಪ್ಪಂದ, ತಮ್ಮನ್ನು ಅಪಾರ ಸಂಕಷ್ಟಕ್ಕೀಡು ಮಾಡಿರುವ ಬೆಲೆಯೇರಿಕೆ, ಹಣದುಬ್ಬರ, ಸರಕಾರದ ದಿವಾಳಿಖೋರ ನೀತಿ ಇವುಗಳಿಗೆದುರಾಗಿ ಭಾರತದ ಕಾರ್ಮಿಕವರ್ಗವಿಂದು ಸಿಡಿದೆದ್ದು ನಿಂತಿದೆ. ಕಡಿಮೆ ದರದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಹಂಚುವಂತೆ ಒತ್ತಾಯಿಸುತ್ತಿದೆ. ಅದೇ ಸಮಯದಲ್ಲಿ ದೇಶದ ಬೆನ್ನೆಲುಬಾದ ರೈತನ ಬೆಳೆಗಳಿಗೂ ಯೋಗ್ಯದರ ನಿಗದಿಪಡಿಸುವಂತೆಯೂ ಕಾರ್ಮಿಕರು ಒತ್ತಾಯಿಸುತ್ತಿದ್ದಾರೆ.

ರಾಷ್ಟ್ರೀಯ ಆಂದೋಲನ ಸಮಿತಿ, ರಾಷ್ಟ್ರೀಯ ಒಕ್ಕೂಟಗಳ ಕರೆಯಂತೆ ಕಾರ್ಮಿಕವರ್ಗ ಸರಕಾರದ ಮೂಲಭೂತ ಆರ್ಥಿಕ ನೀತಿಗೆದುರಾಗಿ, ವಿದೇಶಿ ಮತ್ತು ದೇಶೀಯ ಗುತ್ತೇದಾರರ ಕುರಿತು ಸಹಾನುಭೂತಿ ಹೊಂದಿರುವ ಜನದ್ರೋಹಿ ಸರಕಾರ ವಿರುದ್ಧವಾಗಿ ಕಾರ್ಮಿಕವರ್ಗ ಚಳುವಳಿ ಹೂಡಲು ಸಿದ್ಧವಾಗಿದೆ.

ಕಾರ್ಮಿಕ ಸಂಯುಕ್ತ ಕಾರ್‍ಯಾಚರಣೆ ದೇಶದ ಜನಸಾಮಾನ್ಯರನ್ನು, ಅಸಂಘಟಿತ ಕಾರ್ಮಿಕರನ್ನು ಸ್ಫೂರ್ತಿಗೊಳಿಸಿ, ಪ್ರಜಾಪ್ರಭುತ್ವದ ಮುನ್ನಡೆಗೆ ಮುಂದೆ ಬರಲೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಆಶಿಸಿದೆ.

ಕೇಂದ್ರಸಮಿತಿಯು ಪಾರ್ಟಿಯ ಎಲ್ಲ ಘಟಕಗಳಿಗೂ ಜನವರಿ 19ರಂದು ನಡೆಯಲಿರುವ ರಾಷ್ಟ್ರವ್ಯಾಪೀ ಮುಷ್ಕರಕ್ಕೆ ಸಂಪೂರ್ಣ ಸಹಕರಿಸಬೇಕು, ಶ್ರಮಿಸಬೇಕು ಎಂದು ಕರೆನೀಡಿದೆ.

ಪ. ಬಂಗಾಲ್ ಬಂದ್

ದೇಶದ ಕಾರ್ಮಿಕವರ್ಗದ ಸೌಹಾರ್ದದ ಹೆಗ್ಗುರುತಾಗಿ ರಾಷ್ಟ್ರವ್ಯಾಪಿ ನಡೆಯಲಿರುವ ಮುಷ್ಕರದ ದಿನ (ಜ. 19) ಪ. ಬಂಗಾಲ್ ಬಂದ್ ಆಚರಿಸಲಾಗುವದು ಎಂದು ಪ. ಬಂಗಾಲದ ಎಡರಂಗ ತೀರ್ಮಾನಿಸಿದೆ. ದುಡಿಯುವ ಜನತೆಯ ಬೆಂಗಾವಲಾಗಿ ನಿಂತಿರುವ ಪ. ಬಂಗಾಲದ ಸರಕಾರದ ಈ ನಿರ್ಧಾರ ಅತ್ಯಂತ ಸೂಕ್ತ ಮತ್ತು ಸ್ತುತ್ಯಾರ್ಹ.

ಪ್ರಾಂತ ರೈತಸಂಘದ ಒತ್ತಾಯ
ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಿ

ಕೆಂಪೇಗೌಡ ಸಮಿತಿಯು ಸಲ್ಲಿಸಿರುವ ವರದಿಯ ಆಧಾರದಲ್ಲಿ ಮಲಪ್ರಭ ರೈತ ಹೋರಾಟದಲ್ಲಿ ರೈತರ ಮೇಲೆ ಹೂಡಲಾದ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳುವಂತೆ ಪ್ರಾಂತ ರೈತ ಸಂಘವು ಒತ್ತಾಯಿಸಿದೆ. ಪ್ರಾಂತ ರೈತಸಂಘದ ಪರವಾಗಿ ಬಿಜಾಪುರ ಕಾಂ. ಪಿ. ಜಗನ್ನಾಥ ಈ ಕುರಿತು ಹೇಳಿಕೆಯೊಂದನ್ನು ಹೊರಡಿಸಿದ್ದಾರೆ. ಪೂರ್ತಿಪಾಠ ಇಂತಿದೆ:

"ರಾಜ್ಯದಲ್ಲಿ ರೈತರ ಚಳುವಳಿ ನರಗುಂದ, ನವಲಗುಂದದಲ್ಲಿ ಪ್ರಾರಂಭವಾಗಿ ರಾಜ್ಯದಾದ್ಯಂತ ನಡೆದ ಪೋಲೀಸ್ ದೌರ್ಜನ್ಯಗಳಿಂದ ರೈತರು ಸಾವಿಗೀಡಾದ ಪ್ರಕರಣದಲ್ಲಿ ಸರಕಾರವೇ ನಿಯಮಿಸಿದ್ದ ಕೆಂಪೇಗೌಡ ಸಮಿತಿಯು ವರದಿ ಸಲ್ಲಿಸಿದೆ. ನರಗುಂದ ನವಲಗುಂದ ಘಟನೆಗಳಿಗೆ ಸ್ಥಳೀಯ ಅಧಿಕಾರಿಗಳೇ ಕಾರಣರೆಂದು ಈ ವರದಿ ಸ್ಪಷ್ಟವಾಗಿ ತಿಳಿಸಿದೆ. ಪರಿಸ್ಥಿತಿಯನ್ನು ಹೊಣೆಗೇಡಿತನದಿಂದ ನಿರ್ವಹಿಸಿ ಗೊಂದಲಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಬೇಕೆಂದೂ, ಮಲಪ್ರಭ ರೈತ ಹೋರಾಟದ ಸಮಯದಲ್ಲಿ 18 ರೈತ ಕುಟುಂಬಗಳ ಮೇಲೆ ಹೂಡಲಾದ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದೂ ಪ್ರಾಂತ ರೈತಸಂಘ ಒತ್ತಾಯಿಸುತ್ತದೆ".

"ಭೂನ್ಯಾಯ ಮಂಡಳಿಗಳಲ್ಲಿ ಗೇಣಿದಾರರಿಗೆ ಆಗುತ್ತಿರುವ ಅನ್ಯಾಯ ಭ್ರಷ್ಟಾಚಾರವನ್ನು ತಡೆಯಬೇಕೆಂದು ದ.ಕ. ಜಿಲ್ಲೆಯ ಸುಳ್ಯತಾಲ್ಲೂಕಿನಲ್ಲಿ ನಡೆಯುತ್ತಿರುವ ಹೋರಾಟವನ್ನು ಪ್ರಾಂತ ರೈತಸಂಘ ಬೆಂಬಲಿಸುತ್ತದೆ. ರೈತರ ಸಮಸ್ಯೆಯನ್ನು ತೀವ್ರ ಈಡೇರಿಸದಿದ್ದರೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರೈತರ ಹೋರಾಟದ ಕಾರ್ಯಕ್ರಮ ರೂಪಿಸಲು ರೈತಸಂಘ ಕರೆ ನೀಡುತ್ತದೆ.

"ಭೂ ನ್ಯಾಯ ಮಂಡಳಿಗಳಲ್ಲಿ ಮತ್ತು ಇತ್ತೀಚೆಗೆ ರಚನೆಯಾಗುತ್ತಿರುವ ಭೂವಿತರಣಾ ಸಮಿತಿಗಳಲ್ಲಿ ಆಳುವ ಪಕ್ಷದ ಪುಢಾರಿಗಳ ಕೈವಾಡದಿಂದ ರೈತರು ವಂಚಿತರಾಗುತ್ತಿದ್ದಾರೆ. ಈ ಸಮಿತಿಗಳಲ್ಲಿ ರೈತಸಂಘದ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಕೊಡಬೇಕು."

ಸರಕಾರ ವಸತಿಹೀನರಿಗೆ ವಸತಿ ಸೌಲಭ್ಯ ಕಲ್ಪಿಸುವದಕ್ಕಾಗಿ ಪ್ರಚಾರ ಭರವಸೆಗಳನ್ನು ನೀಡುತ್ತಿರುವಾಗಲೇ ನಗರದ ದುಡಿಯುವ ಬಡಕೂಲಿಕಾರರ ಗುಡಿಸಲುಗಳನ್ನು ಕೆಡವುತ್ತಿರುವುದನ್ನು ಉಗ್ರವಾಗಿ ಖಂಡಿಸಿರುವ ಪ್ರಾಂತರೈತಸಂಘವು ಕೂಡಲೇ ನೊಂದವರಿಗೆ ವಸತಿ ಸೌಕರ್ಯ ಕಲ್ಪಿಸಬೇಕೆಂದು ಒತ್ತಾಯಿಸಿದೆ.

ಎಸ್. ಎಫ್. ಐ. ಜಿಲ್ಲಾ ಸಮಿತಿ ಸಭೆ

16-11-81ರಂದು ಕುಂದಾಪುರದಲ್ಲಿ ಎಸ್.ಎಫ್.ಐ. ಜಿಲ್ಲಾ ಸಮಿತಿಯ ಸಭೆ ನಡೆಯಿತು. ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

1) ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಮುಖ್ಯವಾಗಿ ಉಡುಪಿ ತಾಲ್ಲೂಕಿನಲ್ಲಿ ಶಾಲಾ ಕಾಲೇಜುಗಳಲ್ಲಿ, ಫೀ ವಿನಾಯಿತಿಗಾಗಿ ಗ್ರಾಮಲೆಕ್ಕಾಧಿಕಾರಿಯಿಂದ ಆದಾಯದ ಬಗ್ಗೆ ಶಿಫಾರಸನ್ನು ಒಳಗೊಂಡ ಆದಾಯ ಘೋಷಣ ಸರ್ಟಿಫಿಕೇಟನ್ನು ಕೊಟ್ಟಿದ್ದರೂ, ತಹಶೀಲ್ದಾರರು ಏಕಾಏಕಿಯಾಗಿ ಗ್ರಾಮಲೆಕ್ಕಾಧಿಕಾರಿಯವರು ಶಿಫಾರಸು ಮಾಡಿದ ಆದಾಯವನ್ನು ಮೂರುನಾಲ್ಕು ಪಟ್ಟು ಹೆಚ್ಚಿಸಿ ವಿದ್ಯಾರ್ಥಿಗಳನ್ನು ಫೀ ವಿನಾಯಿತಿಯಿಂದ ವಂಚಿಸಲಾಗಿದೆ. ಉಡುಪಿ ತಾಲ್ಲೂಕಿನಲ್ಲಿ ಫೀ ವಿನಾಯಿತಿಗಾಗಿ ಅರ್ಜಿ ಹಾಕಿದ ಶೇ. 80ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗಾದ ಫೀ ವಿನಾಯಿತಿಯಿಂದ ವಂಚಿತರಾಗಿದ್ದಾರೆ. ಆದಾಯ ಪುನಃ ಪರಿಶೀಲನೆಯ ನೆಪದಲ್ಲಿ ಬಡವಿದ್ಯಾರ್ಥಿಗಳಾದ ಅನ್ಯಾಯ - ಸರಿಪಡಿಸಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ವಿನಂತಿಸಬೇಕು. ಮತ್ತು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವದಕ್ಕಾಗಿ ಸಂಘಟಿತ ಹೋರಾಟಕ್ಕೆ ವಿದ್ಯಾರ್ಥಿಗಳನ್ನು ಅಣಿಗೊಳಿಸಲು ತೀರ್ಮಾನಿಸಲಾಯಿತು.

2) ಉಪ್ಪಿನಂಗಡಿ ಜ್ಯೂನಿಯರ್ ಕಾಲೇಜಿನಲ್ಲಿ ಅಧ್ಯಾಪಕರ ಕೊರತೆಯ ಬಗ್ಗೆ ಅನೇಕ ದಿನಗಳಿಂದ ಒತ್ತಾಯಿಸುತ್ತಾ ಬಂದಿದ್ದರೂ ಗಮನಿಸಿ ಸದ್ರಿ ಕಾಲೇಜಿನ ಮುಂದೆ ಉಪವಾಸ ಸತ್ಯಾಗ್ರಹ ಹೂಡಲು ತೀರ್ಮಾನಿಸಲಾಯಿತು.

3) ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಉಪಹಾರಕ್ಕಾಗಿ ಸರಕಾರವು ಹಣಮಂಜೂರು ಮಾಡುತ್ತಿದ್ದು ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ಜಾರಿಯಾಗದಿರುವುದರ ಕುರಿತು ಜಿಲ್ಲಾಸಮಿತಿ ಗಮನಿಸಿ ಈ ವ್ಯವಸ್ಥೆಯನ್ನು ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಕೂಡಲೇ ಜಾರಿಗೊಳಿಸುವಂತೆ ಸರಕಾರವನ್ನು ಒತ್ತಾಯಿಸಲಾಯಿತು.

4) ಗೋಕಾಕ್ ಸಮಿತಿಯ ಶಿಫಾರಸಿನನ್ವಯ ಕನ್ನಡವನ್ನು ಎಲ್ಲಹಂತಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಬೇಕು.

ಕಾಂ. ಗಂಗಾದರ ಅಧಿಕಾರಿ ನಿಧನ

ಭಾರತದ ಕಮ್ಯುನಿಸ್ಟ್ ಚಳುವಳಿಯ ಆದ್ಯಪ್ರವರ್ತಕರಲ್ಲೊಬ್ಬರಾದ ಡಾ. ಗಂಗಾಧರ ಅಧಿಕಾರಿಯವರು 21-11-81 ರಂದು ದೆಹಲಿಯ ಪಂತ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. 83 ವರ್ಷ ವಯಸ್ಸಿನ ಡಾ. ಅಧಿಕಾರಿಯವರನ್ನು ಈ ತಿಂಗಳು 18 ರಂದು ಆಸ್ಪತ್ರೆಗೆ ಸೇರಿಸಲಾಗಿತ್ತು.

ಡಾ|| ಅಧಿಕಾರಿಯವರು ಮಹಾರಾಷ್ಟ್ರದಲ್ಲಿನ ಕೊಲಾಬಾ ಜಿಲ್ಲೆಯ ಪೋನ್‌ವೇಲಾ ಗ್ರಾಮದಲ್ಲಿ 1898 ಡಿಸೆಂಬರ್ 8ರಂದು ಜನ್ಮತಳೆದಿದ್ದರು. ಅವರು ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಕೆಲಸದಲ್ಲಿದ್ದರು. ನಂತರ ಜರ್ಮನಿಗೆ ತೆರಳಿ ಬರ್ಲಿನ್ ಯೂನಿವರ್ಸಿಟಿಯಲ್ಲಿ ರಸಾಯನ ಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಸಂಪಾದಿಸಿದರು. ಬರ್ಲಿನ್‌ನಲ್ಲಿದ್ದಾಗ ಅಲ್ಲಿಯ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ ಸೇರಿದ್ದರು.

ಭಾರತಕ್ಕೆ ಹಿಂತಿರುಗಿದ ನಂತರ ಡಾ|| ಅಧಿಕಾರಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಂಡರು. ಇತಿಹಾಸ ಪ್ರಸಿದ್ಧ ಮೀರತ್ ಮೊಕದ್ದಮೆಯಲ್ಲಿ ಒಬ್ಬ ಪ್ರಮುಖ ಅಪರಾಧಿಯಾಗಿದ್ದರು. 1943ರಲ್ಲಿ ಬೊಂಬಾಯಿಯಲ್ಲಿ ನಡೆದ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು. ಪಕ್ಷ ಇಬ್ಭಾಗವಾದ ಸಿ.ಪಿ.ಐ.ಗೆ ಸೇರಿದರು.

ಇತ್ತೀಚಿನ ಅವಧಿಯಲ್ಲಿ ಅವರು ಭಾರತದ ಕಮ್ಯುನಿಸ್ಟ್ ಚಳುವಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಸಂಪಾದಿಸುತ್ತಿದ್ದರು. ಆರೋಗ್ಯ ಕೆಟ್ಟಿದ್ದರೂ ಅವಿಶ್ರಾಂತವಾಗಿ ಕೆಲಸದಲ್ಲಿ ನಿರತರಾಗಿದ್ದರು.

ಡಾ. ಅಧಿಕಾರಿಯವರ ನಿಧನದ ನಿಮಿತ್ತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಹೇಳಿಕೆಯೊಂದನ್ನು ಹೊರಡಿಸಿ ಸಂತಾಪ ವ್ಯಕ್ತಪಡಿಸಿದೆ. ಡಾ. ಅಧಿಕಾರಿಯವರ ಬದುಕು ದೇಶದ ಯುವಜನತೆಗೆ ಸ್ಫೂರ್ತಿದಾಯಕ ಎಂದು ಪಿ. ಬಿ. ತಿಳಿಸಿದೆ.

ಸಮಾವೇಶ

23-11-81ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಸ್ಥಳೀಯ ಯುವಕರ ಸಮಾವೇಶವೊಂದನ್ನು ನಡೆಸಲಾಯಿತು. ಯುವಜನ ಸಂಘಟನೆಯ ಜಿಲ್ಲಾ ಪ್ರಧಾನಕಾರ್ಯದರ್ಶಿ ಕೆ. ವಿ. ಸತ್ಯನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಸಮಾವೇಶದಲ್ಲಿ ಸ್ಥಳೀಯ ಸಂಘಟನಾ ಸಮಿತಿಗೆ ಸಂಚಾಲಕರಾಗಿ ಆರ್. ಮುನಿಯಪ್ಪ, ಸಹಸಂಚಾಲಕರಾಗಿ ಅನ್ವರಪಾಶಾ ಇವರನ್ನು ಆಯ್ಕೆ ಮಾಡಲಾಗಿದ್ದು ಡಿಸೆಂಬರ್ ಕೊನೆಯ ವೇಳೆಗೆ ಶಿಡ್ಲಘಟ್ಟ ಡಿ. ವೈ. ಎಫ್. ಐ. ಘಟಕದ ಸಮ್ಮೇಳನ ನಡೆಸಲು ತೀರ್ಮಾನಿಸಿದೆ.

ಬಹಿರಂಗ ಸಭೆ

ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ವಿರುದ್ಧ, ಸೌದೆ ಬೆಲೆ ಟನ್‌ಗೆ 100ರೂ. ಇದ್ದುದನ್ನು ರೂ. 250ಗೆ ಏರಿಸಿದರ ವಿರುದ್ಧ, ದಿನಬಳಕೆ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡದಿರುವುದರ ಕುರಿತು ಶಿವಮೊಗ್ಗದಲ್ಲಿ 23-11-81ರಿಂದ 28-11-81ರವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರಗತಿಪರ ಜನತಂತ್ರರಂಗದ ಕಾರ್ಯಕರ್ತರು ಉಪವಾಸ ಸತ್ಯಾಗ್ರಹ ಮಾಡಿದ್ದರೂ ಸರಕಾರ ಯಾವದೇ ಕ್ರಮಕೈಗೊಂಡಿಲ್ಲ.

ಉಪವಾಸ ಸತ್ಯಾಗ್ರಹದ ಕೊನೆಯ ದಿನ (28-11-81)ದ ಸಾಯಂಕಾಲ 5 ಘಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ನಾಗರಿಕರ ಬೃಹತ್ ಮೆರವಣಿಗೆ ಹೊರಟು ನಂತರ ನಗರದ ಗೋಪಿ ಸರ್ಕಲ್‌ನಲ್ಲಿ ಬಹಿರಂಗ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಗೌರಮ್ಮ ವಹಿಸಿದ್ದರು. ರಂಗದ ಸಂಚಾಲಕರೂ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಚಂದೂಕುಟ್ಟಿಯವರು ಆರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿದರು. ಸಭೆಯನ್ನು ಉದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಶಿವಶಂಕರ, ಲೋಕದಳದ ಶ್ರೀ ಪುಟ್ಟಯ್ಯ, ಜನತಾ ಪಕ್ಷದ ಶ್ರೀ ಶಂಕರನಾರಾಯಣ ಮತ್ತು ಶ್ರೀ ಮೋಹನ್ ಮತ್ತು ಕಾಂಗ್ರೆಸ್ (ಎಸ್) ಪರವಾಗಿ ಶ್ರೀ ಕೆ. ಎಚ್. ಶ್ರೀನಿವಾಸ ಮಾತನಾಡಿ ಸರಕಾರದ ಜನವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸಿದರು.

ವಾಟಾಳ್ ನಾಗರಾಜ್‌ರಂತವರನ್ನು ದಲ್ಲಾಳಿಯಾಗಿಟ್ಟುಕೊಂಡು ಸನ್ಮಾನ ಸಮಾರಂಭಗಳಲ್ಲಿ ಕಾಲಕಳೆಯುತ್ತಿರುವ ಗುಂಡೂರಾಯರನ್ನು ಟೀಕಿಸಿದ ಭಾಷಣಕಾರರು ಜನಸಾಮಾನ್ಯರ ಬೇಡಿಕೆಗಳನ್ನು ಮುಂದಿಟ್ಟು ಹೋರಾಡುತ್ತಿರುವ ಪ್ರಗತಿಪರ ಜನತಂತ್ರರಂಗವನ್ನು ಬಲಪಡಿಸಲು ಕರೆ ನೀಡಿದರು.

ಕೊನೆಯಲ್ಲಿ ಜಿ. ಎಸ್. ನಾಗರಾಜ್ ವಂದನಾರ್ಪಣೆ ಮಾಡಿದರು.

ಮುಷ್ಕರ ಅಂತ್ಯ

12-11-81ರಿಂದ ಮಂಗಳೂರಿನ ಶ್ರೀ ಕೃಷ್ಣಾ ಟ್ರಾವೆಲ್ಸ್ ಬಸ್ ಕಂಪನಿಯ ನೌಕರರು ಕಾನೂನು ಬಾಹಿರವಾಗಿ ಕೆಲವು ಕಾರ್ಮಿಕರನ್ನು ವಜಾ ಮಾಡಿದ್ದನ್ನು ಪ್ರತಿಭಟಿಸಿ ಮುಷ್ಕರ ಹೂಡಿದ್ದರು.

ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.)ನಲ್ಲಿ ಸಂಘಟಿತರಾದ ಈ ನೌಕರರು ಕಳೆದ ಎರಡು ತಿಂಗಳುಗಳಿಂದ ತಮಗೆ ಸಿಗಬೇಕಾದ ಕಾನೂನುಬದ್ಧ ಸೌಲಭ್ಯಗಳಿಗೋಸ್ಕರ ಮತ್ತು ಕೆಲವು ನೌಕರರನ್ನು ವಜಾಮಾಡಿದ್ದರ ಕುರಿತು ಆಡಳಿತವರ್ಗಕ್ಕೆ ಮನವಿ ಸಲ್ಲಿಸಿದ್ದರೂ ಏನೂ ಪರಿಣಾಮವಾಗಿರಲಿಲ್ಲ. ಕಾರಣ ನೌಕರರು ಅನಿವಾರ್ಯವಾಗಿ ಮುಷ್ಕರ ಹೂಡಿದ್ದರು.

ಕೊನೆಗೆ 21-11-81ರಂದು ಆಡಳಿತವರ್ಗ ಮತ್ತು ಕಾರ್ಮಿಕಸಂಘಗಳ ಪ್ರತಿನಿಧಿಗಳ ನಡುವೆ ಮಾತುಕತೆ ನಡೆದು ವಜಾಮಾಡಲಾದ ನೌಕರರನ್ನು ವಾಪಸ್ ತೆಗೆದುಕೊಳ್ಳುವ ಮತ್ತು ಮಜೂರಿಯಲ್ಲಿ ಹೆಚ್ಚಳ ಕುರಿತು ಒಪ್ಪಂದವಾಯಿತು. ಕಾರ್ಮಿಕರ ಪರವಾಗಿ ಯೂನಿಯನ್ ಅಧ್ಯಕ್ಷ ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾರ್ಯದರ್ಶಿ ಕಾಂ. ಮೂಸಬ್ಬ ಮಾತುಕತೆಯಲ್ಲಿ ಕಾರ್ಮಿಕರನ್ನು ಪ್ರತಿನಿಧಿಸಿದ್ದರು.

ರೈತಸಂಘದ ಬಹಿರಂಗ ಸಭೆ

10-11-81ರಂದು ಪುತ್ತೂರು ತಾಲ್ಲೂಕಿನ ಕೋಣಾಜೆಯಲ್ಲಿ ತಾಲ್ಲೂಕು ರೈತ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಕಾಂ. ತುಂಬನ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸುಳ್ಯ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ. ಮೋನಪ್ಪಗೌಡ, ಬಾಲಕೃಷ್ಣಗೌಡ ಮತ್ತು ಕಾಂ. ಬಿ. ರಾಮಕೃಷ್ಣರು ಆಗಮಿಸಿದ್ದರು.

ಲೆನಿನ್ನರ ವಿಚಾರಗಳು :

ಕಮ್ಯುನಿಸ್ಟ್ ಪಕ್ಷದ ಕುರಿತು

—ಸುಧೀಂದ್ರ ಕುಲಕರ್ಣಿ

[ಕಮ್ಯುನಿಸ್ಟ್ ಪಕ್ಷ ಎಂದರೇನು? ಅದರ ಧ್ಯೇಯೋದ್ದೇಶಗಳೇನು? ಅದರ ಅಂತರ್‌ರಚನೆ ಹಾಗೂ ಕಾರ್ಯಕ್ರಮಗಳನ್ನು ಮಾರ್ಗದರ್ಶಿಸುವ ತತ್ವಗಳಾವುವು? ಜನತೆ ಹಾಗೂ ಪಕ್ಷ ಇವುಗಳ ನಡುವಿನ ಸಂಬಂಧ ಏನು? ಕಾರ್ಮಿಕವರ್ಗವು ಕ್ರಾಂತಿಯನ್ನು ಪ್ರತ್ಯಕ್ಷದಲ್ಲಿ ನೆರವೇರಿಸುವ ವಿಷಯಕ್ಕೆ ಸಂಬಂಧಿಸಿದ ಈ ಪ್ರಶ್ನೆಗಳ ಕುರಿತು ಮಾರ್ಕ್ಸ್-ಎಂಗೆಲ್ಸ್‌ರ ಲೇಖನಗಳಲ್ಲಿ ವಿವರವಾದ ಮಂಡನೆಯಿಲ್ಲ. ಈ ಪ್ರಶ್ನೆಗಳ ಬಗ್ಗೆ ಆಳವಾದ, ಸುಸ್ಪಷ್ಟವಾದ ವಿವರಣೆ ನೀಡಿದುದು ಲೆನಿನ್ನರು ಮಾರ್ಕ್ಸ್‌ವಾದದ ಸೃಜನಾತ್ಮಕ ಬೆಳವಣಿಗೆಗೆ ಇತ್ತ ಅತ್ಯಂತ ಅಮೂಲ್ಯ ಕೊಡುಗೆ. ಪಕ್ಷದ ಕುರಿತಾದ ಲೆನಿನ್ನರ ವಿಚಾರಗಳನ್ನೇ ಅನಂತರ ಸ್ಟಾಲಿನ್ನರು ಸುಸಂಬದ್ಧವಾಗಿ ಹಾಗೂ ಭಾಷ್ಯರೂಪದಲ್ಲಿ ತಮ್ಮ "ಲೆನಿನ್‌ವಾದದ ಮೂಲಾಧಾರಗಳು" ಈ ಪುಸ್ತಕದಲ್ಲಿ ಮಂಡಿಸಿದರು. ಈ ಪುಸ್ತಕದಲ್ಲಿಯ ಕೆಲವು ಮುಖ್ಯ ಭಾಗಗಳ ಸಾರಾಂಶವನ್ನು ನಮ್ಮ ವಾಚಕರೆದುರು ಪ್ರಸ್ತುತಪಡಿಸುತ್ತಿದ್ದೇವೆ. ಈ ಪುಸ್ತಕ ಬರೆದಾಗಿನ ಐತಿಹಾಸಿಕ ಸಂದರ್ಭಕ್ಕೂ ಹಾಗೂ ಇಂದು ನಮ್ಮ ದೇಶದಲ್ಲಿನ ವಿಶಿಷ್ಟ ರಾಜಕೀಯ ಪರಿಸ್ಥಿತಿಗೂ ಮಹತ್ವದ ಅಂತರವಿದ್ದರೂ ಈ ಕೆಳಗಿನ ಮೂಲಭೂತ ವಿಚಾರಗಳು ಉದ್ಬೋಧಕವಾಗಿವೆ.]

ಕ್ರಾಂತಿಪೂರ್ವ ಕಾಲದಲ್ಲಿ, ಹೆಚ್ಚು ಕಡಿಮೆ ಶಾಂತಿಯುತ ವಿಕಾಸದ ಕಾಲದಲ್ಲಿ, ಎರಡನೆಯ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನಲ್ಲಿಯ ಪಕ್ಷಗಳು ಕಾರ್ಮಿಕವರ್ಗದ ಚಳುವಳಿಗಳಲ್ಲಿ ಪ್ರಭಾವಿ ಶಕ್ತಿಗಳಾಗಿದ್ದರೂ ಕೂಡ ಸಂಸದೀಯ ಸ್ವರೂಪದ ಚಳುವಳಿಯನ್ನೇ ಪ್ರಮುಖವೆಂದು ಸ್ವೀಕರಿಸಿದ್ದರಿಂದ ನಂತರದ ಕ್ರಾಂತಿಕಾರೀ ಹೋರಾಟಗಳ ಕಾಲದಲ್ಲಿ ಕಾರ್ಮಿಕ ವರ್ಗವನ್ನು ಮಾರ್ಗದರ್ಶಿಸಲು ಅವು ಅಸಮರ್ಥವಾದವು. ಕಾರ್ಮಿಕವರ್ಗವನ್ನು ಅಧಿಕಾರಗ್ರಹಣವತ್ತ ಕೊಂಡೊಯ್ಯಲು ತಾವು ಅಸಮರ್ಥ ಎಂದು ತೋರಿಸಿಕೊಟ್ಟವು. ಅವು ಕಾರ್ಮಿಕ ವರ್ಗದ ಹೋರಾಟದ ಪ್ರವೃತ್ತಿಯ ಪಕ್ಷಗಳಾಗಿರದೇ, ಸಂಸದೀಯ ಚುನಾವಣೆಗಳು ಹಾಗೂ ಸಂಸದೀಯ ಸಂಘರ್ಷ ಇವುಗಳಿಗೆ ಉಪಯುಕ್ತವೆಂಬಂಥ ಸಾಧನಗಳಾಗಿದ್ದವು. ಎರಡನೆಯ ಇಂಟರ್‌ನ್ಯಾಷನಲ್‌ನಲ್ಲಿಯ ಸುಧಾರಣಾವಾದಿ ಜನರು ಯಾವಾಗ ಪ್ರಭಾವಿಯಾಗಿದ್ದರೋ ಆಗ ಕಾರ್ಮಿಕ ವರ್ಗದ ರಾಜಕೀಯ ಸ್ವರೂಪದ ಮುಖ್ಯ ಸಂಘಟನೆಯು ಪಕ್ಷವಾಗಿರದೇ ಅದರಲ್ಲಿಯ ಸಂಸದೀಯ ಗುಂಪಾಗಿತ್ತು. ಆ ಕಾಲದಲ್ಲಿ ಪಕ್ಷ ಎಂದರೆ ಸಂಸದೀಯ ಗುಂಪು ಹೇಳಿದಂತೆ ಕೇಳುವ, ಕೆಳದರ್ಜೆಯ ಉಪವಿಭಾಗವಾಗಿತ್ತು. ಇಂಥ ಪಕ್ಷವು ಉಚ್ಚಸ್ಥಾನದಲ್ಲಿ ಆರೂಢವಾಗಿರುವಾಗ ಕ್ರಾಂತಿಗಾಗಿ ಕಾರ್ಮಿಕವರ್ಗವನ್ನು ಸಿದ್ಧಗೊಳಿಸುವ ಪ್ರಶ್ನೆಯೇ ಉದ್ಭವಿಸುವದಿಲ್ಲ ಎಂಬುದಕ್ಕೆ ಪುರಾವೆಗಳ ಅಗತ್ಯ ಇಲ್ಲ! ಆದರೆ ಹೊಸ ಯುಗದ ಉದಯದ ನಂತರ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಗಿದೆ. ಈ ಹೊಸ ಯುಗವು ಬಹಿರಂಗ ವರ್ಗಸಂಘರ್ಷದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಕೃತ್ಯಗಳ ಯುಗವಾಗಿದೆ. ಈ ಕಾಲದಲ್ಲಿ ಸಾಮ್ರಾಜ್ಯವಾದವನ್ನು ಹೊಡೆದುರುಳಿಸುವದಕ್ಕಾಗಿ ಹಾಗೂ ಕಾರ್ಮಿಕ ವರ್ಗವು ಅಧಿಕಾರವನ್ನು ಕೈವಶಪಡಿಸಿಕೊಳ್ಳುವುದಕ್ಕಾಗಿ ಅದರ ಎಲ್ಲ ಶಕ್ತಿಗಳನ್ನು ಸನ್ನದ್ಧಗೊಳಿಸುವ ಕಾರ್ಯ ನಡೆದಿದೆ. ಈ ಕಾಲದಲ್ಲಿ ಕಾರ್ಮಿಕ ವರ್ಗದ ಎದುರು ಹೊಸ ಸವಾಲುಗಳಿವೆ. ಪಕ್ಷದ ಎಲ್ಲ ಕೆಲಸಗಳನ್ನೂ ಹೊಸ ಹಾಗೂ ಕ್ರಾಂತಿಕಾರೀ ಚೌಕಟ್ಟಿನಲ್ಲಿ ಪುನರ್‌ಸಂಘಟಿಸುವ ಕಾರ್ಯವಿದೆ: ಕಾರ್ಮಿಕರಿಗೆ ಅಧಿಕಾರ ಗ್ರಹಣಕ್ಕಾಗಿ ಕೈಕೊಳ್ಳಬೇಕಾದ ಕ್ರಾಂತಿಕಾರಿ ಹೋರಾಟಗಳ ಶಿಕ್ಷಣ ನೀಡಬೇಕಾಗಿದೆ; ಕಾದಿಟ್ಟ ಶಕ್ತಿಗಳನ್ನು ಸಿದ್ಧಗೊಳಿಸುವ ಹಾಗೂ ಅವುಗಳಿಗೆ ಪಾಲನೆ ನೀಡುವ ಕಾರ್ಯವಿದೆ; ನೆರೆಹೊರೆಯ ದೇಶಗಳಲ್ಲಿಯ ಕಾರ್ಮಿಕ ವರ್ಗದೊಂದಿಗೆ ಐಕ್ಯವನ್ನು ಸಾಧಿಸಬೇಕಾಗಿದೆ; ವಸಾಹತುಗಳು ಹಾಗೂ ಪರಾವಲಂಬಿ ದೇಶಗಳಲ್ಲಿನ ಮುಕ್ತಿ ಆಂದೋಳನದೊಂದಿಗೆ ಘನಿಷ್ಠ ಸಂಬಂಧ ಸ್ಥಾಪಿಸುವುದಿದೆ; ಇತ್ಯಾದಿ, ಇತ್ಯಾದಿ. ಸಂಸದೀಯತೆಯ ಶಾಂತತೆಯ ಪರಿಸ್ಥಿತಿಯಲ್ಲಿ ಸಂಗೋಪನೆಗೊಂಡ ಹಳೆಯ ಸೋಷಿಯಲ್ ಡೆಮೊಕ್ರೆಟಿಕ್ ಪಕ್ಷಗಳು ಈ ಕೆಲಸಗಳನ್ನು ಪೂರ್ಣಗೊಳಿಸಿಯಾವು ಎಂದು ಭಾವಿಸುವುದು ಸೋಲು ಮತ್ತು ನಿರಾಶೆಯ ಮಡುವಿನಲ್ಲಿ ಸ್ವತಃ ಬಿದ್ದುಕೊಂಡಂತೆ. ಈ ಕೆಲಸಗಳು ಮುಂದಿರುವಾಗ ಒಂದು ವೇಳೆ ಕಾರ್ಮಿಕ ವರ್ಗವು ಹಳೆಯ ಬಗೆಯ ನೇತೃತ್ವದಲ್ಲಿ ಮುಂದುವರೆದರೆ ಅದು ಸಂಪೂರ್ಣವಾಗಿ ನಿಷ್ಕ್ರಿಯವಾಗಿಬಿಡುವುದೆಂಬುದರಲ್ಲಿ ಸಂಶಯವಿಲ್ಲ.

ಅಂತೆಯೇ, ಒಂದು ಹೊಸಬಗೆಯ ಹೋರಾಟ ಪ್ರವೃತ್ತಿಯ ಕ್ರಾಂತಿಕಾರೀ ಪಕ್ಷವು ಅಧಿಕಾರಗ್ರಹಣಕ್ಕಾಗಿ ನಡೆಯಬೇಕಾದ ಹೋರಾಟದಲ್ಲಿ ಕಾರ್ಮಿಕ ವರ್ಗದ ನೇತೃತ್ವ ಕೈಗೊಳ್ಳಲು ಸಾಕಷ್ಟು ದಿಟ್ಟತನ ಹೊಂದಿದ ಪಕ್ಷದ ಅಗತ್ಯವಿದೆ. ಕ್ಲಿಷ್ಟವಾದ ಸ್ಥಿತಿಯಲ್ಲಿ ತನ್ನ ದಿಕ್ಕನ್ನು ತಾನೇ ಕಂಡುಕೊಳ್ಳಲು ಅವಶ್ಯವಾದ ಅನುಭವ ಹೊಂದಿದ ಹಾಗೂ ಧ್ಯೇಯದತ್ತ ಹೋಗುವ ಮಾರ್ಗದಲ್ಲಿ ಅಡಗಿರುವ ಎಲ್ಲ ಕಲ್ಲು ಮುಳ್ಳುಗಳನ್ನು ಸರಿಕೊಂಡು ಮುಂದೆ ಹೋಗಲು ಸಾಕಷ್ಟು ಪರಿವರ್ತನಶೀಲತೆ (Flexibility) ಹೊಂದಿದ ಪಕ್ಷದ ಅತ್ಯಂತ ಅವಶ್ಯಕತೆಯಿದೆ.

ಈ ಹೊಸ ಬಗೆಯ ಪಕ್ಷವೆಂದರೆ ಲೆನಿನ್ ಅವರು ಹೇಳಿರುವಂಥ ಪಕ್ಷ. ಈ ಪಕ್ಷದ ವೈಶಿಷ್ಟ್ಯಗಳೇನು?

೧. ಪಕ್ಷವೆಂದರೆ ಕಾರ್ಮಿಕ ವರ್ಗದ ಮುಂಚೂಣಿಯ ವಿಭಾಗ

ಕಾರ್ಮಿಕವರ್ಗದ ಎಲ್ಲ ಸರ್ವೋತ್ಕೃಷ್ಟ ಘಟಕಗಳನ್ನು ಅವರ ಅನುಭವ ಹಾಗೂ ಕ್ರಾಂತಿಕಾರೀ ಪ್ರವೃತ್ತಿಗಳನ್ನು, ಕಾರ್ಮಿಕವರ್ಗದ ಕ್ರಾಂತಿಯ ಕುರಿತು ಅವರಲ್ಲಿರುವ ನಿಷ್ಠೆಯನ್ನೂ ಬಳಸಿಕೊಳ್ಳಲು ಪಕ್ಷವು ಸಮರ್ಥವಾಗಿರಬೇಕು. ಆದರೆ ನಿಜವಾದ ಅರ್ಥದಲ್ಲಿ ಮುಂಚೂಣಿಯ ವಿಭಾಗವಾಗಿರಲು ಪಕ್ಷದ ಬಳಿ ಕ್ರಾಂತಿಕಾರಕ ವಿಚಾರಗಳ ಶಸ್ತ್ರ ಇದ್ದಿರಬೇಕು. ಚಳುವಳಿಗಳ ನಿಯಮಗಳ ಹಾಗೂ ಕ್ರಾಂತಿಯ ನಿಯಮಗಳ ಜ್ಞಾನ ಪಕ್ಷದ ಬಳಿ ಇದ್ದಿರಬೇಕು. ಒಂದು ವೇಳೆ ಕೇವಲ ಕಾರ್ಮಿಕ ಸಮುದಾಯದ ವಿಚಾರ ಹಾಗೂ ಭಾವನೆಗಳನ್ನು ಪ್ರತಿನಿಧಿಸುವುದಕ್ಕೆ ಮಾತ್ರ ಪಕ್ಷದ ಕಾರ್ಯ ಸೀಮಿತಗೊಂಡರೆ ಸ್ವಯಂಪ್ರೇರಿತ (spontaneous) ಆಂದೋಲನದ ಬಾಲ ಹಿಡಿದು ಪಕ್ಷವು ತೆವಳುತ್ತ ಹೋದರೆ, ಇಂತಹ ಆಂದೋಲನದಲ್ಲಡಗಿದ ರಾಜಕೀಯ ಉದಾಸೀನತೆ ಹಾಗೂ ಜಡತೆಗಳನ್ನು ಪಕ್ಷವು ಪ್ರಭಾವಿಯಾಗಿ ದೂರಗೊಳಿಸದಿದ್ದರೆ, ಕಾರ್ಮಿಕವರ್ಗದ ತಾತ್ಕಾಲಿಕ ಹಿತಾಸಕ್ತಿಗಳನ್ನು ದಾಟಿ ಮುಂದೆಡೆಗೆ ತನ್ನನ್ನು ತಾನೇ ತೆಗೆದುಕೊಂಡು ಹೋಗಲು ಪಕ್ಷವು ಅಸಮರ್ಥಗೊಂಡರೆ, ಕಾರ್ಮಿಕವರ್ಗದ ವರ್ಗೀಯ ಹಿತಸಂಬಂಧಗಳ ಅರಿವು ಮೂಡುವಂಥ ಮಟ್ಟದ ಮೇಲೆ ಸಮುದಾಯವನ್ನು ಪಕ್ಷವು ತರದೇ ಹೋದರೆ— ಆ ಪಕ್ಷವು ನಿಜವಾದ ಅರ್ಥದಲ್ಲಿ ಪಕ್ಷವೇ ಅಲ್ಲ. ಸಮುದಾಯವನ್ನು ಪಕ್ಷವು ತರದೇ ಹೋದರೆ-ಆ ಪಕ್ಷವು ನಿಜವಾದ ಅರ್ಥದಲ್ಲಿ ಪಕ್ಷವೇ ಅಲ್ಲ. ಸಮುದಾಯದ ಸಧ್ಯದ ಅರಿವು ಹಾಗೂ ಕಾರ್ಯಾಚರಣೆಯ ಮಟ್ಟಕ್ಕೇ ತನ್ನನ್ನು ಮಿತಿಗೊಳಿಸದೆ ಪಕ್ಷವು ಸಮುದಾಯಕ್ಕಿಂತ ದೂರದೃಷ್ಟಿ ಹೊಂದಿದ ನೇತೃತ್ವ ನೀಡಬೇಕು. ಸ್ವಯಂಪ್ರೇರಿತ ಆಂದೋಲನಗಳ ಹಿಂದೆ ಪಕ್ಷವು ಸ್ವತಃ ಜಗ್ಗಿಕೊಳ್ಳಲ್ಪಡಬಾರದು. 'ಬಾಲಂಗೋಸಿ'ತನಕ್ಕೆ ಅಂಟಿಕೊಂಡಿರುವ ದ್ವಿತೀಯ ಇಂಟರ್‌ನ್ಯಾಷನಲ್‌ನ ಪಕ್ಷಗಳು ಬಂಡವಾಳಶಾಹಿ ಧೋರಣೆಗಳ ವಾಹಕಗಳಾಗಿದ್ದು, ಅವು ಕಾರ್ಮಿಕವರ್ಗವನ್ನು ಬಂಡವಾಳಶಾಹಿವರ್ಗದ ಅಸ್ತ್ರವಾಗಿ ಮಾರ್ಪಡಿಸುತ್ತವೆ. ಕಾರ್ಮಿಕವರ್ಗದ ಮುಂಚೂಣಿಯ ವಿಭಾಗವಾಗಿರುವ, ಅವರ ವರ್ಗೀಯ ಹಿತಗಳ ಅರಿವನ್ನು ಪ್ರತಿಯೊಂದು ಸಣ್ಣದೊಡ್ಡ ಚಳುವಳಿಯಲ್ಲೂ ಸಮುದಾಯಕ್ಕೆ ಮಾಡಿಕೊಡುವ ಪಕ್ಷವು ಮಾತ್ರ ಕಾರ್ಮಿಕ ವರ್ಗವನ್ನು ಕಾರ್ಮಿಕ–ಸಂಘ–ವಾದ (Syndicalism)ದ ಮಾರ್ಗದಿಂದ ದೂರದಲ್ಲಿಡಬಹುದು. ಹಾಗೂ ಅದನ್ನು ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಮಾರ್ಪಾಡುಗೊಳಿಸಬಲ್ಲದು.

ಪಕ್ಷವು ಕಾರ್ಮಿಕವರ್ಗದ ರಾಜಕೀಯ ಮುಂದಾಳು. ತಂತ್ರ(strategy) ಮತ್ತು ಕೌಶಲ್ಯ(tactics) ಕಾದಿಟ್ಟ ಶಕ್ತಿಗಳು ಹಾಗೂ ರಣಾಂಗಣದಲ್ಲಿಯ ವಿಧಾನಗಳು, ಆಕ್ರಮಣ ಹಾಗೂ ಹಿಮ್ಮೆಟ್ಟುವಿಕೆ-ಈ ಎಲ್ಲಾ ಸಂಗಾತಿಗಳು ಯುದ್ಧದ ಪರಿಸ್ಥಿತಿಗಿಂತ ಕಡಿಮೆ ಕ್ಲಿಷ್ಟಕರವಾದವುಗಳೇನೂ ಅಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಸ್ವಚ್ಛವಾಗಿ ಯಾರು ನೋಡಬಲ್ಲರು ಹಾಗೂ ಲಕ್ಷಾವಧಿ ಶೋಷಿತರಿಗೆ ಯಾರು ನಿಶ್ಚಿತವಾದ ಮಾರ್ಗದರ್ಶನ ನೀಡಬಲ್ಲರು? ಸೋಲುವ ಇಚ್ಛೆ ಇಲ್ಲದ ಯಾವುದೇ ಸೈನ್ಯಕ್ಕೆ ಅನುಭವಿ ಸೈನ್ಯಾಧಿಕಾರಿಗಳ ಅವಶ್ಯಕತೆ ಚಿನ್ನೆ ಇರುತ್ತದೆ. ಹಾಗಾದರೆ ಶತ್ರುವಿನ ಕೈಯಲ್ಲಿ ಕಾರ್ಮಿಕವರ್ಗಕ್ಕೆ ಸ್ವತಃ ನಾಶಹೊಂದುವುದು ಬೇಕಿಲ್ಲದಿದ್ದರೆ ಇಂತಹ ಸೈನ್ಯಾಧಿಕಾರಿ ಮಂಡಳಿಯು ಇರುವುದೆಲ್ಲಿ? ಕೇವಲ ಕ್ರಾಂತಿಕಾರಕ ಪಕ್ಷವು ಮಾತ್ರ ಕಾರ್ಮಿಕ ವರ್ಗದ ಸೈನಾಧಿಕಾರಿ ಮಂಡಳಿಯಾಗಿರಬಲ್ಲದು. ಕ್ರಾಂತಿಕಾರಕ ಪಕ್ಷವಿಲ್ಲದ ಕಾರ್ಮಿಕವರ್ಗವು ಅಧಿಕಾರ ಮಂಡಳಿಯಿಲ್ಲದ ಸೈನ್ಯವಿದ್ದಂತೆ.

ಆದರೆ ಪಕ್ಷವು ಕೇವಲ ಮುಂದಾಳತ್ವದಲ್ಲಿಯ ವಿಭಾಗವಾಗಿರದೇ ಅದು ಕಾರ್ಮಿಕವರ್ಗದ ಒಂದು ವಿಭಾಗವಾಗಿರಬೇಕು. ಎಲ್ಲ ಜೀವಂತ ಎಳೆಗಳಿಂದ ಅದು ಈ ವರ್ಗದೊಂದಿಗೆ ಗಟ್ಟಿಯಾಗಿ ತನ್ನನ್ನು ತಾನು ಕಟ್ಟಿಕೊಂಡಿರಬೇಕು. ಮುಂಚೂಣಿಯಲ್ಲಿಯ ವಿಭಾಗ ಹಾಗೂ ಉಳಿದ ಕಾರ್ಮಿಕ ವರ್ಗ, ಪಕ್ಷ ಸದಸ್ಯರು ಹಾಗೂ ಪಕ್ಷದ ಹೊರಗಿನ ಜನರು, ಇವರಲ್ಲಿಯ ವ್ಯತ್ಯಾಸವು ವರ್ಗಗಳು ಅಳಿಸಲ್ಪಟ್ಟು ವರ್ಗರಹಿತ ಸಮಾಜದ ನಿರ್ಮಾಣದ ತನಕ ನಶಿಸಲಾರದು. ಎಲ್ಲಿಯವರೆಗೆ ಇತರ ವರ್ಗಗಳಿಂದ ಕಾರ್ಮಿಕವರ್ಗದಲ್ಲಿ ಸೇರ್ಪಡೆಯ ಪ್ರಕ್ರಿಯೆ ಸಾಗುವುದೋ, ಎಲ್ಲಿಯವರೆಗೆ ಸಮಗ್ರ ಕಾರ್ಮಿಕವರ್ಗವು ಮುಂಚೂಣಿ ವಿಭಾಗದ ಪ್ರಗತಿಯ ಮಟ್ಟಕ್ಕೆ ಏರುವ ಅವಸ್ಥೆ ಬಂದಿರುವುದಿಲ್ಲವೋ, ಅಲ್ಲಿಯವರೆಗೆ ಈ ವ್ಯತ್ಯಾಸವು ಇರುವುದು ಸಹಜ. ಆದರೆ ಒಂದು ವೇಳೆ ಈ ಐತಿಹಾಸಿಕ ವ್ಯತ್ಯಾಸವು ಪ್ರತ್ಯಕ್ಷದಲ್ಲಿ ಪ್ರತ್ಯೇಕತೆಯ ರೂಪತಾಳಿದರೆ ಅಥವಾ ಪಕ್ಷವು ಹೊರಗಿನ ಸಮುದಾಯದೊಂದಿಗಿನ ತನ್ನ ಜೀವಂತ ಸಂಬಂಧವನ್ನು ಸಡಿಲಗೊಳಿಸತೊಡಗಿದರೆ ಅದು ಪಕ್ಷವಾಗಿಉಳಿಯುವುದು ಸಾಧ್ಯವಿಲ್ಲ. ಪಕ್ಷ ಹಾಗೂ ಸಮುದಾಯದ ನಡುವೆ ಘನಿಷ್ಠ ಸಂಬಂಧಗಳಿರದಿದ್ದರೆ, ಸಮುದಾಯವು ಪಕ್ಷದ ಮುಂದಾಳತ್ವವನ್ನು ತಾನಾಗಿಯೇ ಮಾನ್ಯಮಾಡದಿದ್ದರೆ, ಸಮುದಾಯದ ಮಧ್ಯೆ ಪಕ್ಷಕ್ಕೆ ನೈತಿಕ ಹಾಗೂ ರಾಜಕೀಯ ಮಾನ್ಯತೆ ಇರದಿದ್ದರೆ, ಅಂಥ ಪಕ್ಷವು ನೇತೃತ್ವ ನೀಡುವದು ಅಸಾಧ್ಯ. ಪಕ್ಷದ ಹೊರಗಿನ ಅಸಂಖ್ಯ ಸಮುದಾಯವು ಈ ಪಕ್ಷವು ತನ್ನ ಪಕ್ಷವಾಗಿದೆ, ತನಗೆ ಹತ್ತಿರವಾದ, ಪ್ರಿಯವಾದ ಪಕ್ಷವಾಗಿದೆ ಎಂದು ಮನ್ನಿಸಬೇಕು. ತನ್ನ ಮಧ್ಯದಲ್ಲಿಯ ದಿಟ್ಟ, ಅನುಭವಿ, ಬದ್ಧಿವಂತ ಕಾರ್ಮಿಕರನ್ನು ತಾನಾಗಿಯೇ ಸಮುದಾಯವು ಪಕ್ಷದ ಸದಸ್ಯರಾಗಲು ಪ್ರೇರೇಪಿಸುವಂತಾಗಬೇಕು. ಪಕ್ಷ ಹಾಗೂ ಸಮುದಾಯ ಇವುಗಳ ನಡುವಿನ ಇಂಥ ಅವ್ಯಕ್ತ ನೈತಿಕ ಸಂಬಂಧಗಳಿಂದ ಮಾತ್ರವೇ ಈ ವರ್ಗದ ನಿರ್ಣಾಯಕ ರಾಜಕೀಯ ಶಕ್ತಿಯಾಗಿ ಪಕ್ಷದ ಅಸ್ತಿತ್ವ ಸಾಧ್ಯವಾಗುತ್ತದೆ.

೨. ಪಕ್ಷ ಎಂದರೆ ಕಾರ್ಮಿಕ ವರ್ಗದ ಸಂಘಟಿತ ವಿಭಾಗ

ಕಾರ್ಮಿಕ ವರ್ಗದ ಆಂದೋಲನಕ್ಕೆ ಸರಿಯಾದ ದಿಶೆಯನ್ನು ತೋರಿಸುವ ಕಾರ್ಯವನ್ನು ಮಾಡಬೇಕಾದರೆ ಪಕ್ಷವು ಕೇವಲ ಮುಂಚೂಣಿಯ ವಿಭಾಗವಾಗಿದ್ದರೆ ಸಾಲದು, ಅದು ಸಂಘಟಿತ ವಿಭಾಗವಾಗಿರುವದೂ ಅತ್ಯವಶ್ಯಕ. ಬಂಡವಾಳಶಾಹಿ ಸಮಾಜದಲ್ಲಿ ಪಕ್ಷದ ಎದುರಿಗಿನ ಕೆಲಸಗಳು ಪ್ರಚಂಡ ಹಾಗೂ ವಿವಿಧ ಸ್ವರೂಪದ್ದಾಗಿರುತ್ತದೆ. ಎಲ್ಲ ಆಂತರಿಕ ಹಾಗೂ ಬಾಹ್ಯ ವಿಕಾಸ ಇವೆರಡೂ ಜರುಗುತ್ತಿವೆಯೋ ಅಂಥ ವಿಲಕ್ಷಣ ಪರಿಸ್ಥಿತಿಗಳಲ್ಲಿ ಶ್ರಮಿಕವರ್ಗದ ಆಂದೋಲನಕ್ಕೆ ದಿಶೆಯನ್ನು ತೋರಿಸುವ ಕಾರ್ಯವನ್ನು ಪಕ್ಷವು ಕೊಳ್ಳಬೇಕಾಗುತ್ತದೆ. ಯಾವಾಗ ಆಕ್ರಮಣದ ಅವಶ್ಯಕತೆ ಉಂಟೆಯೋ ಆಗ ಕಾರ್ಮಿಕವರ್ಗದ ಆಕ್ರಮಣದ ನೇತೃತ್ವವನ್ನು ಪಕ್ಷ ವಹಿಸಿಕೊಳ್ಳಬೇಕಾಗುತ್ತದೆ. ಬಲಶಾಲಿ ಶತ್ರುವಿನ ದಾಳಿಗಳಿಂದ ತಪ್ಪಿಸಿಕೊಳ್ಳುವದಕ್ಕಾಗಿ ಹಿಂದಕ್ಕೆ ಸರಿಯುವ ಅವಶ್ಯಕತೆಯಿಂದ್ದಾಗ ಕೂಡ ಯೋಗ್ಯವಾದ ರೀತಿಯ ಹಿಮ್ಮೆಟ್ಟುವಿಕೆಯ ನೇತೃತ್ವವನ್ನು ಪಕ್ಷವಹಿಸಿಕೊಳ್ಳಬೇಕಾಗುತ್ತದೆ.

ಪಕ್ಷದ ಹೊರಗಿನ ಲಕ್ಷಾವಧಿ ಕಾರ್ಮಿಕರಿಗೆ ಆಂದೋಲನದ ಶಿಸ್ತು ಹಾಗೂ ಕ್ರಮಬದ್ಧತೆಗಳನ್ನು ಅದು ಕಲಿಸಬೇಕು ಹಾಗೂ ಸಂಘಟಿತರಾಗಿ ವ್ಯವಹರಿಸುವ ವೃತ್ತಿ ಹಾಗೂ ದೃಢತೆಗಳನ್ನು ಅವರಲ್ಲಿ ಜಾಗೃತಗೊಳಿಸಬೇಕು. ಪಕ್ಷವು ಶಿಸ್ತು ಹಾಗೂ ಸಂಘಟನೆಗಳ ಆಧಾರದ ಮೇಲೆ ರಚಿತಗೊಂಡಿದ್ದರೆ ಮಾತ್ರ ಅದು ಈ ಮಹತ್ವದ ಕಾರ್ಯವನ್ನು ಈಡೇರಿಸಬಲ್ಲದು.

ಪಕ್ಷವು ಒಂದು ಸಂಘಟಿತ ಘಟಕ (Organised whole) ಎಂಬ ಲೆನಿನ್ನರ ಸಂಕಲ್ಪನೆಯು ಬೊಲ್ಶೆವಿಕ್ ಪಕ್ಷಕ್ಕೆ ಆಧಾರಭೂತವಾದುದು. ನಮ್ಮ ಪಕ್ಷದ ನಿಯಮಾವಳಿಯ ಪ್ರಕಾರ ಪಕ್ಷವೆಂದರೆ ಪಕ್ಷದ ಸಂಘಟನೆಗಳ ಒಟ್ಟು ಮೊತ್ತ. ಪಕ್ಷದ ಸಂಘಟನೆಗಳ ಪೈಕಿ ಯಾವುದಾದರೂ ಒಂದು ಸಂಘಟನೆಯಲ್ಲಿ ಸಕ್ರಿಯ ಸದಸ್ಯನಾಗಿರುವುದು ಪಕ್ಷದ ಸದಸ್ಯತ್ವಕ್ಕೆ ಅತ್ಯಗತ್ಯ ಅರ್ಹತೆ. ಮೆನ್ಶೆವಿಕ್‌ರು 1903 ರಲ್ಲಿ ಈ ನಿಯಮಕ್ಕೆ ಆಕ್ಷೇಪವೆತ್ತಿದ್ದರು. ಅದಕ್ಕೆ ಬದಲಾಗಿ ಅವರು ಸ್ವಯಂ ಪ್ರವೇಶದ ಮೇಲೆ ಆಧಾರಿತವಾದ ಒಂದು ಪದ್ಧತಿಯನ್ನು ಮುಂದಿಟ್ಟರು. ಪಕ್ಷಕ್ಕೆ ಯಾವುದೇ ಮಾರ್ಗದಿಂದ ಬೆಂಬಲ ನೀಡುವ ಪ್ರತಿಯೊಬ್ಬ 'ಪ್ರಾಧ್ಯಾಪಕ'ನಿಗೆ ಹಾಗೂ 'ಶಾಲಾ ವಿದ್ಯಾರ್ಥಿಗೆ', ಪ್ರತಿಯೊಬ್ಬ 'ಸಹಾನುಭೂತಿದಾರನಿಗೆ' ಹಾಗೂ 'ಮುಷ್ಕರದಲ್ಲಿ ಭಾಗವಹಿಸುವ ಪ್ರತಿಯೊಬ್ಬನಿಗೂ' ಪಕ್ಷ ಸದಸ್ಯತ್ವದ 'ಪದವಿ' ನೀಡುವ ಪದ್ಧತಿ ಇರಬೇಕೆಂಬ ವಿಚಾರವನ್ನು ಅವರು ಮಂಡಿಸಿದರು. ಒಂದುವೇಳೆ ಈ ವಿಲಕ್ಷಣ ಪದ್ಧತಿಯನ್ನು ನಾವು ಅನುಸರಿಸಿದ್ದಾಗಿದ್ದರೆ ಅಪರಿಹಾರ್ಯವಾಗಿ ನಮ್ಮ ಪಕ್ಷದಲ್ಲಿ ಪ್ರಾಧ್ಯಾಪಕರ ಹಾಗೂ ಶಾಲಾ ವಿದ್ಯಾರ್ಥಿಗಳ ಭರ್ತಿಯಾಗುತ್ತಿತ್ತು; ಅದು ಸಡಿಲಾದ; ಚದುರಿಹೋದ, ಅಸಂಘಟಿತ ಜನಜಂಗುಳಿಯ ರೂಪತಾಳುತ್ತಿತ್ತು. ಸಹಾನುಭೂತಿದಾರರ ಸಮುದ್ರದಲ್ಲಿ ಪಕ್ಷವು ಕಣ್ಮರೆಯಾಗಿಬಿಡುತ್ತಿತ್ತು. ಇದರಿಂದ ಪಕ್ಷ ಹಾಗೂ ವರ್ಗ ಇವುಗಳ ನಡುವಿನ ಸ್ಪಷ್ಟ ಬೇಧರೇಖೆಯು ಅಳಿಸಲ್ಪಡುತ್ತಿತ್ತು. ಹಾಗೂ ಅಸಂಘಟಿತ ಸಮುದಾಯವನ್ನು ಮುಂಚೂಣಿಯ ವಿಭಾಗದ ಮಟ್ಟದವರೆಗೆ ತರುವ ಕೆಲಸವನ್ನು ಪಕ್ಷವು ಈಡೇರಿಸುವುದು ಅವಶ್ಯವಾಗುತ್ತಿತ್ತು.

ಆದರೆ ಕೇವಲ ಪಕ್ಷದ ಜನಸಂಘಟನೆಗಳ ಒಟ್ಟು ಮೊತ್ತ ಮಾತ್ರ ಪಕ್ಷವಲ್ಲ. ಪಕ್ಷ ಎಂದರೆ ಈ ಎಲ್ಲ ಸಂಘಟನೆಗಳಿಂದ ಕೂಡಿ ರಚಿತಗೊಂಡ ಒಂದು ಏಕಾತ್ಮ, ಸಮಗ್ರ ವ್ಯವಸ್ಥೆಯಾಗಿರುತ್ತದೆ. ಈ ವ್ಯವಸ್ಥೆಯಲ್ಲಿ ವರಿಷ್ಠ ಹಾಗೂ ಕನಿಷ್ಠ ಸ್ತರಗಳಲ್ಲಿಯ ಮಂಡಳಿಗಳಿರುತ್ತವೆ. ಬಹುಸಂಖ್ಯಾತರ ಅಭಿಪ್ರಾಯವನ್ನು ಅಲ್ಪಸಂಖ್ಯಾತರು ಮನ್ನಿಸಬೇಕಾಗುತ್ತೆ. ವ್ಯವಹಾರ ವಿಷಯದ ನಿರ್ಣಯಗಳು ಪಕ್ಷದ ಎಲ್ಲ ಸದಸ್ಯರಿಗೆ ಅನ್ವಯಿಸುತ್ತವೆ. ಇವುಗಳ ಹೊರತಾಗಿ ಕಾರ್ಮಿಕವರ್ಗದ ಆಂದೋಲನಗಳಿಗೆ ಸುವ್ಯವಸ್ಥಿತ ಹಾಗೂ ಸಂಘಟಿತ ನೇತೃತ್ವ ಕೊಡಬಲ್ಲ ಸುಸಂಘಟಿತ ಹಾಗೂ ಸಮಗ್ರ ಸ್ವರೂಪದ ಪಕ್ಷ ಸಿದ್ಧಗೊಳ್ಳಲಾರದು.

ಪಕ್ಷದಲ್ಲಿ ಅಲ್ಪಮತೀಯರು ಬಹುಮತೀಯರಿಗೆ ಅನುವರ್ತೀಯರಾಗಿರುವುದು ಪಕ್ಷದ ಕಾರ್ಯವನ್ನು ಕೇಂದ್ರೀಯ ಪದ್ಧತಿಯಿಂದ ಸಾಗಿಸುವದು. ಈ ತತ್ವಗಳಿಗೆ ಅನೇಕ ವೇಳೆ ಅಸ್ಥಿರ ಪ್ರವೃತ್ತಿಯುಳ್ಳ, ಘಟಕಗಳಿಂದ ತೊಡಕು ಉಂಟಾಗುತ್ತದೆ. 'ನೌಕರಶಾಹಿ' ಹಾಗೂ ಅತಿರೇಖಿ ಔಪಚಾರಿಕತೆ'ಯ ಆರೋಪ ಹುಟ್ಟಿಕೊಳ್ಳುತ್ತದೆ. ಆದರೆ ಸಂಪೂರ್ಣ ಪಕ್ಷವು ಏಕಾತ್ಮ ಪದ್ಧತಿಯಿಂದ ಸುವ್ಯವಸ್ಥಿತವಾಗಿ ಕಾರ್ಯ ನಡೆಸುವದು ಈ ತತ್ವಗಳ ಹೊರತಾಗಿ ಶಕ್ಯವಿಲ್ಲವೆಂಬುದು ಸ್ಪಷ್ಟವಾಗಿದೆ. ಈ ತತ್ವಗಳಿಗೆ ನಿಷ್ಠರಾಗದವರನ್ನು ಲೆನಿನ್ನರು 'ದೊಡ್ಡ ಮನೆತನದ ಅರಾಜಕವಾದಿಗಳು' ಎಂದು ಕರೆದಿದ್ದಾರೆ.

೩. ಪಕ್ಷ ಎಂದರೆ ಕಾರ್ಮಿಕ ವರ್ಗದ ವರ್ಗೀಯ ಸಂಘಟನೆಯ ಸರ್ವೋಚ್ಚರೂಪ:

ಪಕ್ಷ ಇದು ಕಾರ್ಮಿಕ ವರ್ಗದ ಸಂಘಟಿತ ವಿಭಾಗವಾಗಿರುತ್ತದೆ. ಆದರೆ ಪಕ್ಷವು ಕಾರ್ಮಿಕವರ್ಗದ ಏಕಮೇವ ಸಂಘಟನೆಯಾಗಿರುತ್ತದೆ ಎಂದಲ್ಲ. ಪಕ್ಷದ ಹೊರತಾಗಿ ಶೋಷಿತವರ್ಗದ ಇತರ ಅನೇಕ ಸಂಘಟನೆಗಳಿರುತ್ತವೆ ಹಾಗೂ ಈ ಎಲ್ಲವುಗಳ ಅನುಪಸ್ಥಿತಿಯಲ್ಲಿ ಬಂಡವಾಳದಾರ ವರ್ಗದ ವಿರುದ್ಧ ಶೋಷಿತ ವರ್ಗವು ಯಶಸ್ವಿಯಾಗಿ ಹೋರಾಟ ನಡೆಸಲಾರದು. ಈ ಸಂಘಟನೆಗಳೆಂದರೆ: ಕಾರ್ಮಿಕ ಸಂಘಟನೆ (ಟ್ರೇಡ್‌ಯೂನಿಯನ್), ರೈತಸಂಘಟನೆ, ಸಹಕಾರಿ ಸಂಸ್ಥೆಗಳು, ಗಿರಣಿ ಹಾಗೂ ಕಾರ್ಖಾನೆ ಸಮಿತಿಗಳು, ಸಂಸದೀಯ ಗುಂಪು, ಸ್ತ್ರೀ ಸಂಘಟನೆಗಳು, ಪ್ರಕಾಶನ ಸಮಿತಿ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಘ, ವಿದ್ಯಾರ್ಥಿ ಹಾಗೂ ಯುವಕ ಸಂಘಟನೆ, ಪ್ರತ್ಯಕ್ಷ ಕ್ರಾಂತಿಕಾರೀ ಹೋರಾಟಗಳ ಕಾಲದಲ್ಲಿ) ಕ್ರಾಂತಿಕಾರಿ ಯುದ್ಧದಳಗಳು, (ಒಂದು ವೇಳೆ ಕಾರ್ಮಿಕವರ್ಗದ ಅಧಿಕಾರ ಇದ್ದರೆ) ಶಾಸನ ಸಂಸ್ಥೆಯ ಒಂದು ರೂಪವಾಗಿರುವ ಪ್ರತಿನಿಧಿ-ಸಮಿತಿಗಳು (ಸೋವಿಯಟ್ಸ್), ಇತ್ಯಾದಿಗಳು. ಇವುಗಳಲ್ಲಿ ಹೆಚ್ಚಿನ ಸಂಘಟನೆಗಳು ಪಕ್ಷೇತರವಾಗಿದ್ದರೆ, ಕೆಲವು ಪಕ್ಷದೊಂದಿಗೆ ಪ್ರತ್ಯಕ್ಷ ಸಂಬಂಧ ಹೊಂದಿದವುಗಳಾಗಿರುತ್ತವೆ ಅಥವಾ ಪಕ್ಷದ ಟೊಂಗೆಗಳಾಗಿರುತ್ತವೆ. ವಿಶಿಷ್ಟ ಪರಿಸ್ಥಿತಿಗಳಿಗನುಸಾರವಾಗಿ ಇವುಗಳಲ್ಲಿಯ ಎಲ್ಲ ಪ್ರಕಾರದ ಸಂಘಟನೆಗಳ ಅವಶ್ಯಕತೆಯನ್ನು ಕಾರ್ಮಿಕ ವರ್ಗ ಕಂಡುಕೊಳ್ಳುತ್ತದೆ. ಆಂದೋಲನದಲ್ಲಿಯ ಎಲ್ಲ ಕ್ಷೇತ್ರಗಳಲ್ಲಿ ತನ್ನ ವರ್ಗೀಯ ಸ್ಥಾನವನ್ನು ಗಟ್ಟಿಗೊಳಿಸುವದು ಈ ಎಲ್ಲ ಸಂಘಟನೆಗಳ ಅನುಪಸ್ಥಿತಿಯಲ್ಲಿ ಕಾರ್ಮಿಕವರ್ಗಕ್ಕೆ ಅಸಾಧ್ಯ. ಸಂಪೂರ್ಣ ಬಂಡವಾಳಶಾಹಿ ವ್ಯವಸ್ಥೆಯ ಸ್ಥಾನದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸುವ ಒಂದು ಶಕ್ತಿಯಾಗಿ ತನ್ನನ್ನು ತಾನೇ ಕಂಡುಕೊಳ್ಳಲು ಈ ಸಂಘಟನೆಗಳ ಹೊರತಾಗಿ ಕಾರ್ಮಿಕ ವರ್ಗವು ಕಲಿಯಲಾರದು ಹಾಗೂ ತನ್ನನ್ನು ತಾನೇ ತಿದ್ದಿತೀಡಿ ಸಿದ್ಧಪಡಿಸಿಕೊಳ್ಳಲಾರದು. ಆದರೆ ಇಂಥ ನಾನಾ ವಿಧದ ಸಂಘಟನೆಗಳು ಅಸ್ತಿತ್ವದಲ್ಲಿ ಏಕಸೂತ್ರದ ನೇತೃತ್ವ ಹೇಗೆ ಕೊಡಲು ಸಾಧ್ಯ? ಈ ಬಹುವಿಧದ ಸಂಘಟನೆಗಳಿಂದಾಗಿ ನೇತೃತ್ವವು ಬೇರೆಬೇರೆ ದಿಕ್ಕುಗಳಲ್ಲಿ ಎಳೆಯಲ್ಪಡುವದಿಲ್ಲ ಎಂಬುದಕ್ಕೆ ಖಾತ್ರಿಯೇನು? ಇವುಗಳಲ್ಲಿ ಪ್ರತಿಯೊಂದು ಸಂಘಟನೆಯು ತನ್ನ ವಿಶಿಷ್ಟ ಕ್ಷೇತ್ರದಲ್ಲಿಯೇ ಕಾರ್ಯನಿರತರಾಗಿದ್ದರಿಂದ ಅವುಗಳ ನಡಿಗೆಗಳಲ್ಲಿ ಮೇಳ ಸ್ಥಾಪಿಸುವ ಪ್ರಶ್ನೆಯೇ ಉದ್ಭವಿಸುವದಿಲ್ಲ ಎಂದು ಕೆಲವರು ಹೇಳಬಹುದು. ಆದರೆ ಒಂದು ಮಾತ್ರ ಸ್ಪಷ್ಟವೇನೆಂದರೆ ಈ ಎಲ್ಲ ಸಂಘಟನೆಗಳು ಒಂದೇ ದಿಕ್ಕಿನಲ್ಲಿ ಕಾರ್ಯ ಸಾಗಿಸಬೇಕು. ಕಾರಣವೇನೆಂದರೆ ಇವುಗಳು ಕಾರ್ಮಿಕ ವರ್ಗದ ಉನ್ನತಿಗೆ ಶ್ರಮಿಸುವ ಸಂಘಟನೆಗಳಾಗಿವೆ. ಆದರೆ ಪ್ರಶ್ನೆ ಉದ್ಭವಿಸುವದು ಹೀಗೆ: ಈ ಎಲ್ಲ ಸಂಘಟನೆಗಳ ಕಾರ್ಯ ಯಾವ ಒಂದೇ ದಿಕ್ಕಿನಲ್ಲಿ ಸಾಗಬೇಕೋ ಆ ಸರ್ವಸಾಧಾರಣ ದಿಕ್ಕನ್ನು ನಿರ್ಣಯಿಸುವವರು ಯಾರು? ಅವಶ್ಯಕವಾದಷ್ಟು ಅನುಭವವಿದ್ದಂಥ ಹಾಗೂ ಇಂಥ ಸರ್ವಸಾಧಾರಣ ದಿಶೆಯನ್ನು ರಚಿಸಬಲ್ಲ, ಇಷ್ಟೇ ಅಲ್ಲ ಸಾಕಷ್ಟು ಸರ್ವಮಾನ್ಯತೆ ಹೊಂದಿದ ಹಾಗೂ ಎಲ್ಲ ಸಂಘಟನೆಗಳನ್ನೂ ಈ ರಚನೆಗನುಸಾರವಾಗಿ ಮುನ್ನಡೆಯಲು ಪ್ರವೃತ್ತಗೊಳಿಸಬಲ್ಲ ಕೇಂದ್ರೀಯ ಸಂಘಟನೆ ಯಾವುದು? ಹಾದಿಯಲ್ಲಿ ಯಾವುದೇ ಅಡಚಣೆಯು ಬಾರದಂತೆ ನೋಡಿಕೊಳ್ಳುವ ಹಾಗೂ ಏಕಾತ್ಮವಾದ ನೇತೃತ್ವ ನೀಡುವ ಸಂಘಟನೆ ಯಾವುದು? ಕಾರ್ಮಿಕ ವರ್ಗದ ಪಕ್ಷವಾದ ಕಮ್ಯುನಿಸ್ಟ್ ಪಕ್ಷವೇ ಆ ಸಂಘಟನೆ.

ಮೇಲಿನ ಕಾರ್ಯ ಈಡೇರಿಸಲು ಅವಶ್ಯವಿರುವ ಎಲ್ಲ ಗುಣಗಳು ಪಕ್ಷದಲ್ಲಿ ಇರುತ್ತವೆ. ಮೊದಲನೆ ಸಂಗತಿಯೆಂದರೆ, ಪಕ್ಷವು ಕಾರ್ಮಿಕವರ್ಗದಲ್ಲಿಯ ಸರ್ವೋತ್ಕೃಷ್ಟ ಘಟಕಗಳನ್ನು ತನ್ನ ಬಳಿ ಕ್ರೋಢೀಕರಿಸುವ ಕೇಂದ್ರವಾಗಿರುತ್ತದೆ. ಹಾಗೂ ಪಕ್ಷೇತರ ಸಂಘಟನೆಗಳೊಂದಿಗೆ ಈ ಘಟಕಗಳು ಜೀವಂತ ಹಾಗೂ ಹತ್ತಿರದ ಸಂಬಂಧ ಇಟ್ಟುಕೊಂಡಿರುತ್ತವೆ. ಅಥವಾ ಅನೇಕ ಬಾರಿ ಇವು ಆ ಸಂಘಟನೆಗಳಲ್ಲಿ ಮುಂದಾಳತ್ವ ವಹಿಸಿರುತ್ತವೆ. ಎರಡನೆಯ ಸಂಗತಿಯೇನೆಂದರೆ, ಕಾರ್ಮಿಕವರ್ಗದಲ್ಲಿಯ ಸರ್ವೋತ್ಕೃಷ್ಟ ವ್ಯಕ್ತಿಗಳನ್ನು ಏಕತ್ರಗೊಳಿಸುವ ಕೇಂದ್ರವಾಗಿರುವುದರಿಂದ ಪಕ್ಷವು ಕಾರ್ಮಿಕರಿಗೆ ವರ್ಗೀಯ ಮುಖಂಡತ್ವದ ತರಬೇತಿ ನೀಡುವ ಸರ್ವೋತ್ತಮ ಶಾಲೆಯಾಗಿರುತ್ತದೆ. ಹಾಗೂ ವರ್ಗೀಯ ಸಂಘಟನೆಗಳ ಪ್ರತಿಯೊಂದು ಪ್ರಕಾರವನ್ನು ನಿರ್ವಹಿಸಿ ಅದಕ್ಕೆ ಮಾರ್ಗದರ್ಶನ ನೀಡುವ ಕ್ಷಮತೆಯನ್ನು ಈ ಮುಖಂಡರಲ್ಲಿ ಬೆಳೆಯಿಸುತ್ತದೆ. ಮೂರನೆಯ ಸಂಗತಿಯೇನೆಂದರೆ, ಕಾರ್ಮಿಕವರ್ಗದ ಮುಖಂಡರಿಗೆ ಶಿಕ್ಷಣ ನೀಡಿ ತಯಾರುಗೊಳಿಸುವ ಸರ್ವೋತ್ತಮ ಶಾಲೆಯಾದುದರಿಂದ, ಅನುಭವ ಹಾಗೂ ಪ್ರತಿಷ್ಠೆ ಈ ಎರಡೂ ದೃಷ್ಟಿಕೋನಗಳಿಂದ ಕಾರ್ಮಿಕ ಆಂದೋಲನದ ನೇತೃತ್ವವನ್ನು ತನ್ನೆಡೆಗೆ ಕೇಂದ್ರೀಕೃತಗೊಳಿಸುವ ಸಾಮರ್ಥ್ಯ ಹೊಂದಿದ ಏಕಮೇವ ಸಂಘಟನೆಯಾಗಿ ಪಕ್ಷ ಇರುತ್ತದೆ. ಇಂಥ ಕೇಂದ್ರೀಕರಣದಿಂದಾಗಿ ಶೋಷಿತವರ್ಗದ ಪ್ರತಿಯೊಂದು ಪಕ್ಷೇತರ ಸಂಘಟನೆಯನ್ನು ಒಂದು ಸಹಾಯಕ ಸಂಘಟನೆಯಾಗಿ ಮಾರ್ಪಾಡುಗೊಳಿಸುವುದು ಹಾಗೂ ಅದನ್ನು ಪಕ್ಷ ಹಾಗೂ ಕಾರ್ಮಿಕವರ್ಗ ಇವುಗಳ ನಡುವೆ ಚಲಿಸುವ ವಾಹಕ-ಪಟ್ಟಿ (Transmission belt) ಯಾಗಿ ಮಾರ್ಪಾಡುಗೊಳಿಸುವುದು ಶಕ್ಯವಾಗುತ್ತದೆ. ಹಾಗಾಗಿ ಪಕ್ಷವು ಕಾರ್ಮಿಕವರ್ಗದ ವರ್ಗೀಯ ಸಂಘಟನೆಗಳ ಪೈಕಿ ಸರ್ವೋಚ್ಚ ಪ್ರಕಾರವಾಗಿದೆ.

ಆದರೆ ಇದರರ್ಥ ಟ್ರೇಡ್‌ಯೂನಿಯನ್, ರೈತಸಂಘಟನೆ ಮುಂತಾದ ಪಕ್ಷೇತರ ಜನಸಂಘಟನೆಗಳು ಅಧಿಕೃತವಾಗಿ ಪಕ್ಷದ ನೇತೃತ್ವದಲ್ಲಿಯೇ ಇರಬೇಕು ಎಂದಲ್ಲ. ಇದರರ್ಥ ಇಷ್ಟೇ: ಈ ಜನಸಂಘಟನೆಗಳಲ್ಲಿರುವ ಹಾಗೂ ಸಹಜವಾಗಿಯೇ ಅವುಗಳಲ್ಲಿ ಪ್ರಭಾವಿಯಾಗಿರುವ ಪಕ್ಷದ ಸದಸ್ಯರು, ತಮ್ಮ ಕಾರ್ಯದ ಮೂಲಕ ಈ ಜನಸಂಘಟನೆಗಳನ್ನು ಪಕ್ಷಕ್ಕೆ ಹತ್ತಿರ ಬರಲು ಹಾಗೂ ಪಕ್ಷದ ನೇತೃತ್ವವನ್ನು ಸ್ವೇಚ್ಛೆಯಿಂದ ಮಾನ್ಯಮಾಡಲು ಪ್ರವೃತ್ತಗೊಳಿಸುವ ದೃಷ್ಟಿಯಿಂದ ಎಲ್ಲ ಬಗೆಯ ಪ್ರಯತ್ನಗಳನ್ನೂ ಮಾಡುತ್ತಾರೆ. (ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯು ಇತ್ತೀಚೆಗೆ ಹೊರಡಿಸಿದ 'ಜನಸಂಘಟನೆಗಳ ಕುರಿತು' ಎಂಬ ಕಿರುಹೊತ್ತಿಗೆಯನ್ನು ಅಭ್ಯಸಿಸುವುದು ಅವಶ್ಯಕ ಹಾಗೂ ಲಾಭದಾಯಕ-ಲೇ).

ಪಕ್ಷೇತರ ಸಂಘಟನೆಗಳ 'ಸ್ವಾತಂತ್ರ್ಯದ' ಹಾಗೂ 'ತಟಸ್ಥತೆ'ಯನ್ನು ಪುರಸ್ಕರಿಸುವ ಸುಧಾರಣಾವಾದಿ ವಿಚಾರ ಪ್ರವಾಹಗಳು ಲೆನಿನ್‌ವಾದಿ ಸಿದ್ಧಾಂತ ಹಾಗೂ ವ್ಯವಹಾರಗಳಿಗೆ ವಿರೋಧಿಯಾಗಿವೆ: ಇವುಗಳಿಂದಾಗಿ ಸಂಸತ್ತಿನ ಪಕ್ಷೇತರ ಸದಸ್ಯರು, ಪಕ್ಷದಿಂದ ದೂರ ನಿಲ್ಲುವ ವೃತ್ತ ಪತ್ರಕಾರರು, ಸಂಕುಚಿತ ವೃತ್ತಿಯ ಟ್ರೇಡ್ ಯೂನಿಯನ್ ಅಧಿಕಾರಿಗಳು ಹಾಗೂ ತಿಳಿಗೇಡಿ ಸಮಾಜಸೇವಕರು ಹುಟ್ಟಿಕೊಳ್ಳುತ್ತಾರೆ.

೪. ಪಕ್ಷ ಎಂದರೆ ಕಾರ್ಮಿಕ ವರ್ಗದ ಏಕಾಧಿಕಾರದ ಅಸ್ತ್ರ

ಪಕ್ಷವು ಕಾರ್ಮಿಕವರ್ಗದ ಅತ್ಯುಚ್ಚ ಸಂಘಟನಾ ರೂಪವಾಗಿದ್ದರೂ ಕೂಡ, ಅದುವೇ ಕಾರ್ಮಿಕ ವರ್ಗದ ಗುರಿಯಲ್ಲಿ ಪಕ್ಷ ತನ್ನಷ್ಟಕ್ಕೇ ಸ್ವಯಂಪೂರ್ಣ ಶಕ್ತಿಯಲ್ಲ. ಅದು ಕಾರ್ಮಿಕವರ್ಗದ ಕೈಯಲ್ಲಿಯ ಒಂದು ಅಸ್ತ್ರ. ಎಲ್ಲಿಯವರೆಗೆ ಕಾರ್ಮಿಕವರ್ಗವು ತನ್ನ ಏಕಾಧಿಕಾರವನ್ನು ಪ್ರಸ್ಥಾಪಿಸಿಲ್ಲವೋ ಅಲ್ಲಿಯವರೆಗೆ ಅದನ್ನು ಸಾಧ್ಯಗೊಳಿಸಲು ಹಾಗೂ ಏಕಾಧಿಕಾರ ಸ್ಥಾಪಿತಗೊಂಡ ನಂತರ ಅದಕ್ಕೆ ಗಟ್ಟಿತನ ತಂದು ಅದನ್ನು ವಿಸ್ತಾರಗೊಳಿಸಲು ಉಪಯೋಗಿಸಬೇಕಾದ ಅಸ್ತ್ರ ಪಕ್ಷವಾಗಿದೆ. ಪಕ್ಷಕ್ಕೆ ಇಂದು ಇಷ್ಟೊಂದು ಹೆಚ್ಚಿನ ಮಹತ್ವ ಏಕೆ ಬಂದಿದೆ? ಹಾಗೂ ಇತರೆಲ್ಲ ಜನಸಂಘನೆಗಳ ಮೇಲೆ ಪಕ್ಷದ ಪ್ರಭಾವ ಇಂದು ಏಕೆ ಬೀಳುತ್ತಿದೆ? ಏಕೆಂದರೆ ಕಾರ್ಮಿಕವರ್ಗದ ಎದುರು ಇಂದು ಅಧಿಕಾರದ ಪ್ರಶ್ನೆ ಎದ್ದು ನಿಂತಿದೆ. ಸಾಮ್ರಾಜ್ಯವಾದ, ಯುದ್ಧದ ಅಪರಿಹಾರ್ಯತೆ ಹಾಗೂ ಬಿಕ್ಕಟ್ಟಿನ ಅಸ್ತಿತ್ವ ಇವುಗಳಿಂದಾಗಿ ಕಾರ್ಮಿಕವರ್ಗದ ಎಲ್ಲ ಶಕ್ತಿಯನ್ನೂ ಒಂದೇ ಬಿಂದುವಿನಲ್ಲಿ ಕೇಂದ್ರೀಕರಿಸುವ, ಕ್ರಾಂತಿಕಾರಿ ಆಂದೋಲನದ ಎಲ್ಲ ಪ್ರವಾಹಗಳನ್ನೂ ಒತ್ತೊಟ್ಟಿಗೆ ತರುವ ಅವಶ್ಯಕತೆ ಇಂದು ನಿರ್ಮಾಣಗೊಂಡಿದೆ. ಬಂಡವಾಳಗಾರ ವರ್ಗದ ಪ್ರಭುತ್ವವನ್ನು ಪುಡುಗಟ್ಟಿ ಕಾರ್ಮಿಕ ವರ್ಗದ ಏಕಾಧಿಕಾರಶಾಹಿಯನ್ನು ಸಾಧ್ಯಗೊಳಿಸುವ ಕರ್ತವ್ಯ ಕಾರ್ಮಿಕ ವರ್ಗದ ಎದುರಿದೆ. ರಾಜ್ಯ ಸತ್ತೆಯನ್ನು ಕೈವಶಪಡಿಸುವ ಸೈನ್ಯಾಧಿಕಾರಿಗಳ ಮುಂದಿಯ ಸ್ವರೂಪದಲ್ಲಿ ಪಕ್ಷದ ಅವಶ್ಯಕತೆ ಇದೆ. ಏಕಾಧಿಕಾರವನ್ನು ಸ್ಥಾಪಿಸಿದ ಬಳಿಕ ಅದನ್ನು ಗಟ್ಟಿಗೊಳಿಸಿ, ವಿಸ್ತೃತಗೊಳಿಸಿ ಸಮಾಜವಾದದ ಪೂರ್ಣವಿಜಯವನ್ನು ಸಾಧ್ಯಗೊಳಿಸುವುದಕ್ಕಾಗಿ ಪಕ್ಷದ ಕರ್ತವ್ಯ.

ಕಾರ್ಮಿಕವರ್ಗದ ಸರ್ವಾಧಿಕಾರವನ್ನು 'ಕಾಪಾಡುವದು' ಹಾಗೂ 'ವಿಸ್ತೃತಗೊಳಿಸುವದು' ಎಂದರೆ ಏನು? ಲಕ್ಷಾವಧಿ ಶೋಷಿತರಲ್ಲಿ ಶಿಸ್ತು, ಏಕತೆ ಹಾಗೂ ಸಂಘಟನಾ ವ್ಯಕ್ತಿಗಳನ್ನು ಪ್ರೋತ್ಸಾಹಿಸುವದು ಮಧ್ಯಮವರ್ಗೀಯ ಪ್ರವೃತ್ತಿಗಳನ್ನು ಹಾಗೂ ಚಟಗಳನ್ನು ಬೆಳೆಯಿಸುವ ಪ್ರಭಾಗಳ ವಿರುದ್ಧ ಕಾರ್ಮಿಕ ಸಮುದಾಯದಲ್ಲಿ ಅಡ್ಡಗೋಡೆ ರಚಿಸುವದು ಹಾಗೂ ಅದನ್ನು ಸುಭದ್ರವಾಗಿಸುವ ಶಕ್ತಿಯನ್ನು ಕಾರ್ಮಿಕ ವರ್ಗದಲ್ಲಿ ತಯಾರುಗೊಳಿಸುವದು, ಮಧ್ಯಮವರ್ಗದ ಸ್ತರಗಳಲ್ಲಿ ಪುನರ್‌ಶಿಕ್ಷಣ ಹಾಗೂ ಪುನರುತ್ಥಾನಕ್ಕಾಗಿ ಕಾರ್ಮಿಕ ಸಂಘಟನೆಗಳ ಕಾರ್ಯವನ್ನು ಹೆಚ್ಚಿಸುವದು, ವರ್ಗನಷ್ಟಗೊಳಿಸುವ ಹಾಗೂ ಸಮಾಜವಾದಿ ಉತ್ಪಾದನಾ ವ್ಯವಸ್ಥೆ ಹಾಗೂ ಸಮಾಜ ವ್ಯವಸ್ಥೆಯನ್ನು ಸಂಘಟಿತಗೊಳಿಸುವ ಶಕ್ತಿಯನ್ನು ಬೆಳೆಸಿಕೊಳ್ಳಲು ಸ್ವಂತದ ಪ್ರಶಿಕ್ಷಣ ಮಾಡಿಕೊಳ್ಳಲು ಕ್ರಾಂತಿಕಾರಿ ವರ್ಗಕ್ಕೆ ನೆರವು ನೀಡುವದು. ಆದರೆ ಒಕ್ಕಟ್ಟು ಹಾಗೂ ಶಿಸ್ತುಗಳ ಆಧಾರದ ಮೇಲೆ ನಿಂತ ಬಲಶಾಲಿ ಪಕ್ಷದ ಗೈರುಹಾಜರಿಯಲ್ಲಿ ಈ ಎಲ್ಲ ಗುರಿಗಳನ್ನು ತಲುಪುವದು ಅಸಾಧ್ಯ.

'ಕಾರ್ಮಿಕ ವರ್ಗದ ಸರ್ವಾಧಿಕಾರ ಎಂದರೆ ಹಳೆಯ ಸಮಾಜದ ಶಕ್ತಿ ಹಾಗೂ ಸಂಪ್ರದಾಯ ಇವುಗಳ ವಿರುದ್ಧ ಧೃಡಸಂಕಲ್ಪದಿಂದ ಕೈಕೊಳ್ಳಬೇಕಾದ ಸಂಘರ್ಷವಾಗಿದೆ. ಅದು ರಕ್ತರಹಿತವಾಗಿರಬಹುದು. ಶಾಂತರೀತಿಯದ್ದಾಗಿರಬಹುದು. ಮಿಲಿಟರಿ ಹಾಗೂ ಆರ್ಥಿಕ, ಶೈಕ್ಷಣಿಕ ಹಾಗೂ ಆಡಳಿತಾತ್ಮಕವಾಗಿರಬಹುದು. ಹೋರಾಟಗಳಲ್ಲಿ ಬೆಂದು ಬಳಲಿ ಹೊರಬಂದ ಉಕ್ಕಿನ ಶಿಸ್ತಿನ ಕಾರ್ಮಿಕ ವರ್ಗದಲ್ಲಿಯ ಎಲ್ಲ ಪ್ರಮಾಣಿಕ ಜನರ ವಿಶ್ವಾಸ ಸಂಪಾದಿಸಿದ ಮತ್ತು ಸಮುದಾಯದ ಮನಃಸ್ಥಿತಿಯನ್ನು ಅಭ್ಯಸಿಸಿ ಅದರ ಮೇಲೆ ಪರಿಣಾಮ ಬೀರಬಲ್ಲ ಪಕ್ಷದ ಹೊರತಾಗಿ ಇಂಥ ಸಂಘರ್ಷ

ವನ್ನು ಯಶಸ್ವಿಯಾಗಿ ಸಾಗಿಸುವುದು ಅಸಾಧ್ಯವೇ ಸರಿ' (ಲೆನಿನ್)

೫. ಪಕ್ಷ ಎಂದರೆ ಗುಂಪುಗಾರಿಕೆಯ ಅಸ್ತಿತ್ವಕ್ಕೆ ಸಂಪೂರ್ಣ ವಿರೋಧಿಯಾದ, ಐಕ್ಯ ಸಂಕಲ್ಪದ ಮೂರ್ತ ಸ್ವರೂಪ

ದೃಢಸಂಕಲ್ಪದ ಐಕ್ಯವಿಲ್ಲದೆ, ಪಕ್ಷದ ಎಲ್ಲ ಸದಸ್ಯರ ಕೃತಿಯಲ್ಲಿ ಸಂಪೂರ್ಣ ಹಾಗೂ ಏಕ ಸೂತ್ರತೆ ಇರದಿದ್ದಲ್ಲಿ ಪಕ್ಷದಲ್ಲಿ ಉಕ್ಕಿನ ಶಿಸ್ತು ಸಾಧ್ಯವಿಲ್ಲ. ಇದರರ್ಥ ಪಕ್ಷದಲ್ಲಿ ಪರಸ್ಪರ ವಿರೋಧಿ ಮತಾಭಿಪ್ರಾಯಗಳನ್ನು ಅಳಿಸಿ ಹಾಕಲಾಗುವದು ಎಂದಲ್ಲ. ಉಕ್ಕಿನ ಶಿಸ್ತು ಎಂದ ಮಾತ್ರಕ್ಕೆ ಟೀಕೆ ಹಾಗೂ ವಿರೋಧಿ ವಿಚಾರಗಳ ಸಂಘರ್ಷ ಇವುಗಳ ಮೇಲೆ ನಿರ್ಬಂಧ ವಿಧೆಯೆಂದಲ್ಲ. ಬದಲಾಗಿ ಇವುಗಳನ್ನು ಸ್ವಾಗತಿಸಲಾಗುತ್ತದೆ. ಅಂತೆಯೇ ಈ ತತ್ವದ ಅರ್ಥ ಶಿಸ್ತು ಕುರುಡಾಗಿರಬೇಕು ಎಂದೂ ಅಲ್ಲ. ಕೇವಲ ಅರಿವಿನಿಂದ ಕೂಡಿದ ಶಿಸ್ತೇ ಉಕ್ಕಿನ ಶಿಸ್ತಾಗಿರುತ್ತದೆ. ಆದರೆ ಒಮ್ಮೆ ವಾದವಿವಾದ ಮುಗಿಯಿತು, ಟೀಕೆ–ಪ್ರತಿ ಟೀಕೆ ಮಾಡಿಯಾಯಿತು. ಹಾಗೂ ನಿರ್ಣಯ ತೆಗೆದುಕೊಂಡು ನಂತರ ಸಂಕಲ್ಪ ಹಾಗೂ ಕೃತಿ ಇವುಗಳಲ್ಲಿಯ ಮೇಳ ಪ್ರತಿಯೊಬ್ಬ ಪಕ್ಷದ ಸದಸ್ಯನಲ್ಲಿಯೂ ಇರಲೇಬೇಕು. ಇದಿಲ್ಲದೇ ಪಕ್ಷದಲ್ಲಿ ಐಕ್ಯವೂ ಸಾಧ್ಯವಿಲ್ಲ, ಶಿಸ್ತೂ ಸಾಧ್ಯವಿಲ್ಲ, ಕೃತಿಯೂ ಸಾಧ್ಯವಿಲ್ಲ.

ಇದರಿಂದ ಸುಸ್ಪಷ್ಟಗೊಳ್ಳುವುದೇನೆಂದರೆ ಪಕ್ಷದಲ್ಲಿ ಗುಂಪುಗಾರಿಕೆ ಅಸ್ತಿತ್ವದಲ್ಲಿರುವುದು ಪಕ್ಷದ ಐಕ್ಯ ಹಾಗೂ ಉಕ್ಕಿನ ಶಿಸ್ತಿಗೆ ಮಾರಕ. ಗುಂಪುಗಾರಿಕೆ ಇರುವುದರಿಂದ ಪಕ್ಷದಲ್ಲಿ ಒಂದಕ್ಕಿಂತ ಹೆಚ್ಚಿಗೆ ಕೇಂದ್ರಗಳು ಹುಟ್ಟಿಕೊಳ್ಳುತ್ತವೆ ಎಂಬುದು ಸ್ಪಷ್ಟವಿದೆ. ಹಾಗೂ ಅನೇಕ ಕೇಂದ್ರಗಳ ಅಸ್ತಿತ್ವ ಎಂದರೆ ಪಕ್ಷದಲ್ಲಿ ಒಂದೇ ಒಂದು ಸಾಮಾನ್ಯ ಕೇಂದ್ರದ ಅಭಾವವಿರುವುದು, ಸಂಕಲ್ಪ–ಐಕ್ಯ ಮುರಿದು ಬೀಳುವುದು, ಶಿಸ್ತು ಸಡಿಲಗೊಳ್ಳುವದು ಹಾಗೂ ನಷ್ಟಗೊಳ್ಳತೊಡಗುವುದು, ಏಕಾಧಿಕಾರವು ನಿಶ್ಶಕ್ತ ಹಾಗೂ ವಿಘಟನೆಯತ್ತ ನಡೆಯುವುದು. ಅಂತೆಯೇ ಲೆನಿನ್‌ವಾದಿ ಪಕ್ಷವು ಸಂಕಲ್ಪ-ಐಕ್ಯದ ಪ್ರತಿನಿಧಿತ್ವ ಮಾಡುತ್ತದೆ. ಹಾಗೂ ಯಾವುದೇ ಬಗೆಯ ಅಧಿಕಾರದ ವಿಭಜನೆ ಅಥವಾ ಗುಂಪುಗಾರಿಕೆ ಪಕ್ಷದಲ್ಲಿ ಇರಲಾರದು.

೬. ಸುಧಾರಣಾವಾದಿ ಘಟಕಗಳನ್ನು ಹೊರಗಟ್ಟುವದರಿಂದ ಪಕ್ಷವು ಹೆಚ್ಚು ಬಲಶಾಲಿಯಾಗುವುದು

ಪಕ್ಷದಲ್ಲಿಯ ಗುಂಪುಗಾರಿಕೆಯ ಉಗಮ ಸುಧಾರಣಾವಾದಿ ಘಟಕಗಳಲ್ಲಿರುತ್ತದೆ. ಕಾರ್ಮಿಕವರ್ಗವು ಇತರ ವರ್ಗಗಳಿಂದ ದೂರವಿದ್ದಂಥ ವರ್ಗವಲ್ಲ. ಬಂಡವಾಳಶಾಹಿಯ ವಿಕಾಸದಿಂದಾಗಿ ಕಾರ್ಮಿಕ ವರ್ಗಕ್ಕೆ ನೂಕಲ್ಪಡುವ ರೈತ ಮಧ್ಯಮ ವರ್ಗೀಯ ಹಾಗೂ ಬುದ್ಧಿಜೀವಿ ಜನರು ಕಾರ್ಮಿಕ ವರ್ಗಕ್ಕೆ ನಿರಂತರ ಸೇರ್ಪಡೆ ಹೊಂದುತ್ತಾರೆ. ಮುಖ್ಯತ: ಶೋಷಣೆಯ ಮೂಲಕ ದೊರಕಿಸಿದ ಅಧಿಕಲಾಭದಲ್ಲಿಂದ ಬಂಡವಾಳದಾರರು ಯಾರಿಗೆ ತಿನ್ನಲು ಕೊಟ್ಟಿರುತ್ತಾರೋ ಅಂಥ ಟ್ರೇಡ್‌ಯೂನಿಯನ್ ಪುಡಾರಿಗಳು ಹಾಗೂ ಸಂಸದ್ ಸದಸ್ಯರುಗಳ ವ್ಯಕ್ತಿತ್ವ ಭ್ರಷ್ಟತೆಯ ಪ್ರಕ್ರಿಯೆ ಸದಾ ಸಾಗಿರುತ್ತದೆ. "ಈ ಬಂಡವಾಳದಾರ ವರ್ಗದಂತೆ ರೂಪತಾಳಿದ ಕಾರ್ಮಿಕರು ತಮ್ಮ ಜೀವನ ಪದ್ಧತಿ, ಆರ್ಥಿಕ ಆದಾಯ ಹಾಗೂ ಒಟ್ಟು ದೃಷ್ಟಿಕೋನಗಳಿಂದಾಗಿ ತಮ್ಮ ಕರ್ತವ್ಯ ಮರೆತು, ತಿಂದುಂಡು ಸುಖವಾಗಿ ಬಾಳುವುದೇ ತಮ್ಮ ಗುರಿಯೆಂಬುದನ್ನು ತೋರಿಸಿಕೊಡುತ್ತಾರೆ. ಇಂದಿನ ಕಾಲದಲ್ಲಿ ಇಂಥ ಜನರ ಸ್ತರವೇ ಎರಡನೇ ಇಂಟರ್‌ನ್ಯಾಷನಲ್‌ನ ಪ್ರಮುಖ ಆಧಾರಸ್ತಂಭ, ಬಂಡವಾಳದಾರ ವರ್ಗದ ಪ್ರಮುಖ ಸಾಮಾಜಿಕ (ಮಿಲಿಟರಿ ಅಲ್ಲ) ಆಧಾರ ಸ್ತಂಭವಾಗಿದೆ. ಈ ಜನರೆಂದರೆ ಕಾರ್ಮಿಕ ಆಂದೋಲನದಲ್ಲಿ ಬಂಡವಾಳವರ್ಗದ ನಿಜವಾದ ಹಸ್ತಕರಾಗಿದ್ದಾರೆ. ಬಂಡವಾಳದಾರವರ್ಗದ ಕಾರ್ಮಿಕ ವರ್ಗೀಯ ಸಹಾಯಕರಾಗಿದ್ದಾರೆ. ಪರಿಷ್ಕರಣವಾದ ಹಾಗೂ ಸಂಕುಚಿತವೃತ್ತಿ ಇವುಗಳ ನಿಜವಾದ ವಾಹಕರಾಗಿದ್ದಾರೆ" (ಲೆನಿನ್).

ಒಂದಿಲ್ಲ ಒಂದು ಬಗೆಯಿಂದ ಈ ಎಲ್ಲ ಮಧ್ಯಮವರ್ಗೀಯ ಗುಂಪುಗಳು ಪಕ್ಷದಲ್ಲಿ ಕಾಲಿಡುತ್ತವೆ ಹಾಗೂ ಚಂಚಲವೃತ್ತಿ ಹಾಗೂ ರಾಜೀಪ್ರವೃತ್ತಿ, ಮನೋಧೈರ್ಯದ ಅಭಾವ ಹಾಗೂ ಅನಿಶ್ಚತೆ ಈ ಪ್ರವೃತ್ತಿಗಳನ್ನು ಪಕ್ಷದಲ್ಲಿ ನಿರ್ಮಾಣಗೊಳಿಸುತ್ತವೆ. ಪಕ್ಷದಲ್ಲಿಯ ಗುಂಪುಗಾರಿಕೆ ಹಾಗೂ ವಿಘಟನೆ ಇವುಗಳ ಹಾಗೂ ಅಸಂಘಟಿತತನ ಹಾಗೂ ಘಾತಕ ವೃತ್ತಿಗಳ ಉಗಮ ಪ್ರಾಮುಖ್ಯವಾಗಿ ಇವುಗಳಲ್ಲೇ ಇರುತ್ತದೆ. ತನ್ನ ಹಿಂದೆ ಇಂಥ ಸಂಗಾತಿಗಳನ್ನು ಜೊತೆಗೆ ತೆಗೆದುಕೊಂಡು ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿಯ ವಿರುದ್ಧ ಹೋರಾಡುವದೆಂದರೆ ಎದುರಿನಿಂದ ಹಾಗೂ ಹಿಂದಿನಿಂದ ಹೀಗೆ ಎರಡೂ ಕಡೆಯಿಂದ ಸ್ವಂತದ ಮೇಲೆ ದಾಳಿಯನ್ನು ಆಮಂತ್ರಿಸಿಕೊಂಡಂತೆ. ಅಂತೆಯೇ ಇಂಥ ಘಟಕಗಳ ವಿರುದ್ಧ ನಿರ್ದಯವಾಗಿ ಸಂಘರ್ಷ ನಡೆಸಿ, ಅವುಗಳನ್ನು ಪಕ್ಷದಿಂದ ಹೊರಗಟ್ಟದೇ ಸಮಾಜವಾದಕ್ಕಾಗಿ ನಡೆದಿರುವ ಹೋರಾಟ ಯಶಸ್ವಿಯಾಗುವದು ಅಶಕ್ಯ.

●

ಭೂ-ನ್ಯಾಯ ಮಂಡಲಿಗಳ ಭ್ರಷ್ಟಾಚಾರದ ವಿರುದ್ಧ

ಕುಂದಾಪುರದಲ್ಲಿ ಸಾಮೂಹಿಕ ಸತ್ಯಾಗ್ರಹ

ಪ್ರಾಂತ ರೈತಸಂಘದ ಕುಂದಾಪುರ ತಾಲ್ಲೂಕು ಘಟಕದ ನೇತೃತ್ವದಲ್ಲಿ 25-11-81ರಂದು ಕುಂದಾಪುರ ತಾಲ್ಲೂಕು ಕಚೇರಿ ಎದುರು ಭೂನ್ಯಾಯ ಮಂಡಲಿಗಳ ಭ್ರಷ್ಟಾಚಾರದ ವಿರುದ್ಧ ರೈತ-ಕೃಷಿಕೂಲಿಕಾರರ ಸಾಮೂಹಿಕ ಸತ್ಯಾಗ್ರಹ ನಡೆಯಿತು. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಸತ್ಯಾಗ್ರಹ ನಡೆದ ನಂತರ ಭೂನ್ಯಾಯ ಮಂಡಲಿಗಳು ತಿರಸ್ಕರಿಸಿದ ಎಲ್ಲಾ ಗೇಣಿದಾರರ ಅರ್ಜಿಗಳ ಪುನರ್ ತನಿಖೆಯಾಗಬೇಕು ಎಂಬಿತ್ಯಾದಿ ಬೇಡಿಕೆಗಳುಳ್ಳ ಮನವಿಯನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು. ನಂತರ ಶಾಸ್ತ್ರಿ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಆರಂಭದಲ್ಲಿ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಅಬ್ರಾಹಾಂ ಕರ್ಕಡರು ಮತ್ತು ರೈತ-ಕಾರ್ಮಿಕ ಮುಖಂಡ ಕಾಂ. ಶಂಕರ್ ಅವರು ಸರಕಾರ ಮತ್ತು ಭೂನ್ಯಾಯ ಮಂಡಳಿಗಳ ರೈತ-ಕೃಷಿಕಾರ್ಮಿಕ ವಿರೋಧಿನೀತಿಯನ್ನು ಖಂಡಿಸಿದರು. ದ. ಕ. ಜಿಲ್ಲೆಯಲ್ಲಿ ಹಲವಡೆ ನಡೆಯುತ್ತಿರುವ ರೈತಹೋರಾಟವನ್ನು ಪ್ರಸ್ತಾಪಿಸಿ ತಕ್ಷಣ ರೈತಪ್ರತಿನಿಧಿಗಳನ್ನೊಳಗೊಂಡ ಹೊಸ ಭೂನ್ಯಾಯ ಮಂಡಳಿಗಳು ರಚನೆಯಾಗಬೇಕೆಂದು ಒತ್ತಾಯಿಸಿದರು.

●

ರಾಜ್ಯೋತ್ಸವ

ಡಿ. ವೈ. ಎಫ್. ಐ.ನ ಬೆಂಗಳೂರಿನ ಶ್ರೀರಾಂಪುರ ಘಟಕದ ಆಶ್ರಯದಲ್ಲಿ ನವೆಂಬರ್ 21 ಮತ್ತು 22 ಈ ಎರಡು ದಿನ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕಳೆದ 25 ವರ್ಷಗಳಿಂದ ಸ್ಥಾಪಿತ ಹಿತಾಸಕ್ತಿಗಳು ರಾಜ್ಯೋತ್ಸವದ ಹೆಸರಿನಲ್ಲಿ ಸ್ವಾರ್ಥ ಸಾಧಿಸಿಕೊಳ್ಳುತ್ತ ಭಾಷೆ-ಕೋಮು ಪ್ರಚೋದಕ ಭಾವನೆಗಳನ್ನು ಬಿತ್ತುತ್ತ ಬಂದಿರುವ ಸಂದರ್ಭದಲ್ಲಿ ಶ್ರೀರಾಂಪುರದ ಯುವಜನರು 25ನೇ ರಾಜ್ಯೋತ್ಸವವನ್ನು ಕನ್ನಡಕ್ಕೆ ಪ್ರಾಧಾನ್ಯಕೊಡಬೇಕೆಂಬ ಬೇಡಿಕೆಯೊಂದಿಗೆ ಆಚರಿಸಿದರು.

ರಾಜ್ಯೋತ್ಸವದ ಮೊದಲ ದಿನ ಬೆಂಗಳೂರು ಜಿಲ್ಲಾ ಡಿ. ವೈ. ಎಫ್. ಐ. ಘಟಕದ ಪ್ರಧಾನಕಾರ್ಯದರ್ಶಿ ಎಸ್. ಶಿವರಾಂ ಸ್ವಾಗತಿಸಿದರು. ರಾಜ್ಯ ಘಟಕದ ಪ್ರಧಾನಕಾರ್ಯದರ್ಶಿ ಕಾಂ. ಜಿ. ವಿ. ಶ್ರೀರಾಮ್‌ರೆಡ್ಡಿಯವರು ಭಾಷೆ-ಜನತೆಯ ಸಂಸ್ಕೃತಿ, ಯುವಜನರ ಸಮಸ್ಯೆ ಕುರಿತು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ಜಿಲ್ಲಾ ಡಿ. ವೈ. ಎಫ್. ಐ. ಉಪಾಧ್ಯಕ್ಷರಾದ ಕಾಂ. ಚಂದ್ರು ಅವರು ವಹಿಸಿದ್ದರು.

ಎರಡನೆಯ ದಿನ "ಪುನರ್‌ಜನ್ಮ" ಎಂಬ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

○

ರೈತ, ಕೃಷಿಕಾರ್ಮಿಕರ ಸಮಾವೇಶ

ಪ್ರಾಂತ ರೈತಸಂಘದ ರಾಯಚೂರು ತಾಲ್ಲೂಕು ಘಟಕದ ಆಶ್ರಯದಲ್ಲಿ 20-11-81ರಂದು ತಾಲ್ಲೂಕು ಮಟ್ಟದ ರೈತರ, ಕೃಷಿಕಾರ್ಮಿಕರ ಸಮಾವೇಶ ನಡೆಸಲಾಯಿತು. ರಾಯಚೂರಿನ ರೈತಭವನದಲ್ಲಿ ನಡೆದ ಈ ಸಮಾವೇಶದಲ್ಲಿ ಸುಮಾರು ಒಂದು ನೂರು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಗುಂಜಹಳ್ಳಿ ವೀರಾರೆಡ್ಡಿಯವರು ವಹಿಸಿದ್ದರು. ಸಮಾವೇಶವನ್ನು ಕಾಂ. ಪುರುಷೋತ್ತಮ ಕಲಾಲಬಂಡಿಯವರು ಉದ್ಘಾಟಿಸಿದರು.

ರಾಯಚೂರು ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಕಾಂ. ಶಿವಪುತ್ರಪ್ಪನವರು ಸಮಾವೇಶಕ್ಕೆ ಶುಭಕೋರಿ ಮಾತನಾಡುತ್ತಾ ಇತ್ತೀಚೆಗೆ ಗಂಗಾವತಿಯ ಬಡಜನತೆ ನಡೆಸಿದ್ದ ಹೋರಾಟದ ಕುರಿತು ತಿಳಿಸಿ; ಸಂಘಟನೆಯ ಅವಶ್ಯಕತೆಯನ್ನು ವಿವರಿಸಿದರು.

ಕಾಂ. ಚಂದ್ರಶೇಖರ ಬಾಳಿಯವರು ತಾಲ್ಲೂಕು ಸಂಘಟನಾ ವರದಿ ಸಲ್ಲಿಸಿ, ಕಾಂಗ್ರೆಸ್ ಸರಕಾರದ ರೈತ-ಕಾರ್ಮಿಕ, ಜನಸಾಮಾನ್ಯರ ವಿರೋಧಿ ಧೋರಣೆಯನ್ನು ಖಂಡಿಸಿದರು.

ನಂತರ ಕಾಂ. ಚಂದ್ರಶೇಖರ ಬಾಳಿಯವರು ಅಧ್ಯಕ್ಷರಾಗಿರುವ ಹಾಗೂ 20 ಜನರ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು.

ಮುಖ್ಯ ತೀರ್ಮಾನಗಳು :

1. ಸಕ್ಕರೆ ಹಾಗೂ ಕಾಳುಗಳನ್ನು ರೈತಸಂಘಟನೆಯ ಮೂಲಕ ಜನಸಂಖ್ಯೆ ಆಧಾರದಲ್ಲಿ ವಿತರಣೆ ಮಾಡುವಂತೆ,

2. ತಾಲ್ಲೂಕಿನ ಪ್ರತಿ ಹಳ್ಳಿಗೆ ರಸ್ತೆ ಹಾಗೂ ಪ್ರಯಾಣ ಸೌಕರ್ಯದ ವ್ಯವಸ್ಥೆ, ಕುಡಿಯುವ ನೀರಿನ ಹಾಗೂ ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡುವಂತೆ,

3. ಪ್ರತಿ ಹಳ್ಳಿಗೆ ಶಾಲೆ ಹಾಗೂ ಶಿಕ್ಷಕರನ್ನು ನೇಮಿಸುವಂತೆ,

4. ಹರಿಜನರಿಗೆ ವಸತಿ ಸೌಲಭ್ಯ ಏರ್ಪಡಿಸುವಂತೆ,

5. ಕೃಷಿಕೂಲಿಕರಿಗೆ ಕನಿಷ್ಟ ವೇತನದಲ್ಲಿ ಹೆಚ್ಚಳ, ವೃದ್ಧಾಪ್ಯ ವೇತನ ಕೊಡುವಂತೆ,

6. ತುಂಗಭದ್ರಾ ಎಡದಂಡೆ ಕಾಲುವೆಯು ಒಡೆಯುದಂತೆ ಶಾಶ್ವತ ಕ್ರಮಕೈಗೊಳ್ಳುವಂತೆ ಸರಕಾರಕ್ಕೆ ಒತ್ತಾಯಿಸಲಾಯಿತು.

○

ಲಂಡನ್‌ನಲ್ಲಿ ಭಾರತೀಯ ಕಾರ್ಮಿಕರ ಪ್ರತಿಭಟನೆ

ನವೆಂಬರ್ 22ರಂದು ಲಂಡನ್‌ನಲ್ಲಿರುವ ಭಾರತೀಯ ದೂತಾವಾಸದ ಎದುರು ಭಾರತೀಯ ಕಾರ್ಮಿಕರು ಭಾರತ ಸರಕಾರದ ಅಗತ್ಯ ಸೇವಾ ಕಾನೂನನ್ನು ವಿರೋಧಿಸಿ ಬೃಹತ್ ಮತಪ್ರದರ್ಶನ ನಡೆಸಿದರು. ಬ್ರಿಟನ್ನಿನ ಇಂಡಿಯನ್ ವರ್ಕರ್ಸ್ ಅಸೋಸಿಯೇಷನ್ (Indian Workers Association of Great Britain) ನವರು ಈ ಮತಪ್ರದರ್ಶನವನ್ನು ಸಂಘಟಿಸಿದ್ದರು. ಭಾರತ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ಹೋರಾಡುತ್ತಿರುವ ಭಾರತದ ಕಾರ್ಮಿಕ ಸಂಘಗಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲು ಈ ಮತಪ್ರದರ್ಶನ ನಡೆಯಿತು.

ಲಂಡನ್, ಬರ್ಮಿಂಗ್ ಹ್ಯಾಮ್, ಕ್ಯಾಂಬ್ರಿಜ್, ಡರ್ಬಿ ಮೊದಲಾದೆಡೆಗಳಿಂದ ಭಾರತೀಯ ಕಾರ್ಮಿಕರು ಈ ಮತಪ್ರದರ್ಶನದಲ್ಲಿ ಭಾಗವಹಿಸಲು ಆಗಮಿಸಿದ್ದರು.

ಮತಪ್ರದರ್ಶನದ ನಂತರ ಲಂಡನ್ನಿನ ಆಫ್ರಿಕಾ ಹೌಸ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಬ್ರಿಟನ್ನಿನ ಲೇಬರ್ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿ ಮತ್ತಿತರ ಎಡಪಂಥೀಯ ಧುರೀಣರು ಮಾತನಾಡಿ ಭಾರತ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯನ್ನು ಖಂಡಿಸಿದರು. ಕೂಡಲೇ ಈ ಕರಾಳ ಕಾಯ್ದೆಯನ್ನು ವಾಪಸ್ಸು ಪಡೆಯುವಂತೆ ಭಾರತ ಸರಕಾರವನ್ನು ಒತ್ತಾಯಿಸಿದರು.

ಬೆಂಗಳೂರು ಜಿಲ್ಲಾ ಸಮಿತಿ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ನವೆಂಬರ್ 29 ಮತ್ತು 30ರಂದು ಬೆಂಗಳೂರಿನಲ್ಲಿ ಬೆಂಗಳೂರು ಜಿಲ್ಲಾ ಸಮಿತಿಯ ಸಮ್ಮೇಳನವು ನಡೆಯಿತು. ಆರಂಭದ ದಿನ ಕಾಂ. ಪಿ. ಕೆ. ಸುಬ್ರಮಣಿಯವರು ಧ್ವಜಾರೋಹಣ ಮಾಡುವದರೊಂದಿಗೆ ಸಮ್ಮೇಳನ ಆರಂಭವಾಯಿತು.

ಸಮ್ಮೇಳನವನ್ನು ಉದ್ಘಾಟಿಸಿದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ಮಾತನಾಡುತ್ತಾ ವಿಶ್ವದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. "ಬಂಡವಾಳಶಾಹಿ ಜಗತ್ತಿನಲ್ಲಿ ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದಾಗಿ ಅಮೇರಿಕಾ, ಬ್ರಿಟನ್ ಮುಂತಾದೆಡೆ ನಿರುದ್ಯೋಗ ಉಲ್ಬಣಿಸಿದ್ದು ಜನತೆ ತೀವ್ರವಾದ ಹೋರಾಟಕ್ಕೆ ಇಳಿದಿದ್ದಾರೆ. ಬಂಡವಾಳಶಾಹಿ ನೀತಿಯಿಂದ ಕಂಗೆಟ್ಟ ಜನತೆ ಫ್ರಾನ್ಸ್, ಗ್ರೀಸ್ ಮುಂತಾದೆಡೆ ಜನತೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಪರ್ಯಾಯವಾಗಿ ಆರಿಸಿ ತಂದಿದೆ" ಎಂದರು. ಭಾರತದ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಪ್ರಸ್ತಾಪಿಸಿದ ಕಾಂ. ಎಂ. ಕೆ. ಯವರು ಜನತೆಯ ಸಮಸ್ಯೆಯನ್ನು ಬಗೆಹರಿಸದ ಇಂದಿರಾ ಸರಕಾರ ದಿನೇದಿನೇ ಸರ್ವಾಧಿಕಾರದತ್ತ ವಾಲುತ್ತಿರುವ ಗಂಡಾಂತರವನ್ನು ಕುರಿತು ತಿಳಿಸಿದರು. ಸರ್ವಾಧಿಕಾರಿ ಶಕ್ತಿಗಳನ್ನು ಎದುರಿಸಲು, ಸಮಸ್ಯೆಗಳಿಂದ ಬಳಲುತ್ತಿರುವ ಜನತೆಯ ಬಲಿಷ್ಠ ಸಂಘಟನೆಗಳನ್ನು ಕಟ್ಟಲು ಶ್ರಮಿಸುವಂತೆ ಕರೆ ನೀಡಿದರು.

ನಂತರ ಮಾತನಾಡಿದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ವಿ.ಜೆ.ಕೆ. ನಾಯರ್ ಅವರು ಸಾಲ್ಕಿಯಾ ಮತ್ತು ಮೈಸೂರು ಪ್ಲೀನಂಗಳ ಪಕ್ಷದ ಸಂಘಟನಾ ನಿರ್ಣಯಗಳ ಬಗ್ಗೆ ವಿವರಣೆ ಕೊಟ್ಟರು.

ಜಿಲ್ಲಾ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾವ್ ಅವರು ವರದಿ ಮಂಡಿಸಿದರು. ವರದಿಯ ಮೇಲೆ 37 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು. ಕಾಂ. ಪಿ. ಕೆ. ಸುಬ್ರಮಣಿಯವರು ಕಾರ್ಯದರ್ಶಿಯಾಗಿರುವ 18 ಜನರ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಮಂಗಳೂರಿನಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ 33 ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು.

ಕೊನೆಯಲ್ಲಿ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಎನ್. ಎಲ್. ಉಪಾಧ್ಯಾಯ ಮತ್ತು ಸೂರ್ಯನಾರಾಯಣರಾವ್ ಅವರುಗಳು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ಜಿಲ್ಲಾ ಸಮ್ಮೇಳನದ ಎರಡು ದಿನಗಳ ಕಲಾಪಗಳನ್ನು ಕಾಂ. ಪಿ. ಕೆ. ಸುಬ್ರಮಣಿ, ಆರ್. ಶ್ರೀನಿವಾಸ್ ಮತ್ತು ಕಾಂ. ಶಿವಣ್ಣ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿ ನಿರ್ವಹಿಸಿತು.

ಬಹಿರಂಗ ಸಭೆ

ಸಮ್ಮೇಳನದ ಅಂಗವಾಗಿ 1-12-81ರಂದು ನಗರದ ಚಿಕ್ಕಲಾಲ್ ಬಾಗ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ನೂತನ ಚುನಾಯಿತ ಕಾರ್ಯದರ್ಶಿ ಕಾಂ. ಪಿ. ಕೆ. ಸುಬ್ರಮಣಿ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ. ಸೂರ್ಯನಾರಾಯಣರಾವ್, ಆರ್. ಶ್ರೀನಿವಾಸ ಮತ್ತು ಕಾಂ. ಮುಂಗೀವಾಳಪ್ಪ ಮಾತನಾಡಿದರು.

ಮುಖ್ಯ ನಿರ್ಣಯಗಳು

ಅಗತ್ಯಸೇವಾ ಕಾಯಿದೆ ಮತ್ತು ರಾಷ್ಟ್ರೀಯ ಭದ್ರತಾ ಕಾಯಿದೆಗಳನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅಲ್ಲದೇ ಭೂನ್ಯಾಯ ಮಂಡಳಿಗಳಲ್ಲಿ ಮತ್ತು ಭೂವಿತರಣಾ ಸಮಿತಿಗಳಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಖಂಡಿಸಿದ ಸಮ್ಮೇಳನವು ರೈತಸಂಘದ ಪ್ರತಿನಿಧಿಗಳನ್ನು ಭೂನ್ಯಾಯ ಮಂಡಳಿ ಮತ್ತು ಭೂವಿತರಣಾ ಸಮಿತಿಗಳಲ್ಲಿ ನೇಮಿಸಬೇಕೆಂದು ಒತ್ತಾಯಿಸಿದೆ.

ರಾಜ್ಯದಲ್ಲಿರುವ ಸುಮಾರು 15 ಸಾವಿರ ಸ್ಪೈಫಂಡರಿ ಪದವೀಧರರನ್ನು ಖಾಯಂಮಾಡಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿದ ಸಮ್ಮೇಳನವು ನಿರುದ್ಯೋಗಿಗಳಿಗೆ ನಿರುದ್ಯೋಗ ಪರಿಹಾರ ಕೊಡಬೇಕೆಂದು ಒತ್ತಾಯಿಸಿದೆ.

ಬಿನ್ನಿಮಿಲ್‌ನಲ್ಲಿ ಇಂಟಕ್ (ಐ) ಮಾಡಿಕೊಂಡಿರುವ ಕಾರ್ಮಿಕದ್ರೋಹಿ ಒಪ್ಪಂದವನ್ನು ಕಟುವಾಗಿ ಟೀಕಿಸಿದ ಸಮ್ಮೇಳನವು ಹೋರಾಡುತ್ತಿರುವ ಬಿನ್ನಿಮಿಲ್ ಕಾರ್ಮಿಕರಿಗೆ ಬೆಂಬಲ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಯಾವುದೇ ಪೂರ್ವಸೂಚನೆ ನೀಡದೇ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ನಿವಾಸಿಗಳನ್ನು ಹೊಡೆದೋಡಿಸುವ ಕ್ರಮವನ್ನು ಉಗ್ರವಾಗಿ ಖಂಡಿಸಿದ ಸಮ್ಮೇಳನವು ಈ ಬಡಪಾಯಿ ಕೊಳಚೆ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಒತ್ತಾಯಿಸಿದೆ.

ಸುಮಾರು 12 ವರ್ಷಗಳಿಂದ ಬೆಂಗಳೂರು ನಗರಸಭೆ ಚುನಾವಣೆ ನಡೆಸದೆ ಮುಂದೆ ಹಾಕುತ್ತಾ ಬಂದಿದೆ. ಜನತಾ ಪ್ರತಿನಿಧಿಗಳನ್ನು ಚುನಾಯಿಸುವುದರ ಬದಲು ಮೇಯರ್, ಉಪಮೇಯರ್ ಮತ್ತು ಪ್ರತಿನಿಧಿಗಳನ್ನು ನಾಮಕರಣ ಮಾಡುವ ಹಕ್ಕನ್ನು ಪಡೆದುಕೊಳ್ಳುವ ಸುಗ್ರೀವಾಜ್ಞೆ ಸರಕಾರ ಹೊರಡಿಸಿರುವುದು ಖಂಡಿಸಿರುವ ಸಮ್ಮೇಳನವು ನಗರ ಸಭೆಗಳಿಗೆ ತತ್‌ಕ್ಷಣ ಚುನಾವಣೆಯನ್ನು ನಡೆಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಬೆಂಗಳೂರು ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬಸ್‌ಗಳಿಲ್ಲದೇ ಸಾರ್ವಜನಿಕರು ಸಂಕಷ್ಟ ಪಡುತ್ತಿದ್ದಾರೆ. ಅನಿವಾರ್ಯವಾಗಿ ಜನದಟ್ಟಣೆಯಿಂದಾಗಿ ಜನರು ಫುಟ್‌ಬೋರ್ಡ್‌ನಲ್ಲಿ ಪ್ರಯಾಣಮಾಡುತ್ತಿದ್ದಾರೆ. ಈಗ ಪೋಲೀಸ್‌ನವರು ಫುಟ್‌ಬೋರ್ಡ್‌ನಲ್ಲಿ ಪ್ರಯಾಣಮಾಡುವವರ ಮೇಲೆ ದಂಡ ವಿಧಿಸುತ್ತಿರುವುದಲ್ಲದೇ ದಂಡಕೊಡದಾಗದವರಿಗೆ ಜೈಲು ಶಿಕ್ಷೆ ಲಭಿಸುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳನ್ನು ಹಾಕಿ ಅವ್ಯವಸ್ಥೆ ಸರಿಪಡಿಸಬೇಕೆಂದು ಸಮ್ಮೇಳನವು ಒತ್ತಾಯಿಸಿದೆ.

ಕೇರಳದಲ್ಲಿ ಕಾಂಗ್ರೆಸ್ (ಐ)ಜೊತೆಗೂಡಿ ಸರಕಾರ ರಚಿಸಬೇಕೆಂಬ ಹವಣಿಕೆಯಲ್ಲಿದ್ದ ಕಾಂಗ್ರೆಸ್ (ಎಸ್)ಕೇರಳ ಘಟಕದ ತೀರ್ಮಾನವನ್ನು ತಿರಸ್ಕರಿಸಿ ಎ. ಐ. ಸಿ. ಸಿ. (ಎಸ್) ವರ್ಕಿಂಗ್ ಕಮಿಟಿ ಮಾಡಿದ ತೀರ್ಮಾನವನ್ನು ಜಿಲ್ಲಾ ಸಮ್ಮೇಳನ ಸ್ವಾಗತಿಸಿದೆ.

○

ಹೆತ್ತವರಿಗೊಂದು ಕಿವಿಮಾತು

ಇತ್ತೀಚೆಗೆ ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್ ಪ್ರದೇಶದಲ್ಲಿ ಕಟ್ಟಿಕೊಂಡ ಹೆಂಡತಿಯನ್ನು ಸಜೀವದಹನ ಮಾಡಿರುವ ವರದಿಯಾಗಿದೆ. ಈ ದೌರ್ಜನ್ಯಕ್ಕೆ ಬಲಿಯಾದ ಹೆಣ್ಣಿನ ಹೆಸರು ಮುನಿಲಕ್ಷ್ಮಮ್ಮ. ಮದುವೆ ನಂತರ ವರದಕ್ಷಿಣೆಕೊಡಲಿಲ್ಲವೆಂಬ ಕಾರಣಕ್ಕಾಗಿ ದಿನವೂ ಕಿರುಕುಳ ಅನುಭವಿಸುತ್ತಿದ್ದರು. ಕೊನೆಗೆ ಅವಳ ಗಂಡ ಅವಳನ್ನು ದುಡ್ಡಿನ ದಾಹದಿಂದ ಸಜೀವ ದಹನ ಮಾಡಿರುವುದಾಗಿ ತಿಳಿದು ಬಂದಿದೆ.

ಇನ್ನೊಂದು ಪ್ರಕರಣ : ನೆಲಮಂಗಲದಲ್ಲಿ ನಡೆದದ್ದು. ಇಲ್ಲಿ ದೌರ್ಜನ್ಯಕ್ಕೀಡಾದ ಹೆಣ್ಣು ಕೌಶಲ್ಯ ಎಂಬುವವಳು. ಇವಳ ಅತ್ತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆ, ನೆಲಮಂಗಲ ತಾಲ್ಲೂಕು ಭೂ ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷೆ ಹಾಗೂ ಭೂನ್ಯಾಯ ಮಂಡಳಿಯ ಸದಸ್ಯೆ ಲಕ್ಷ್ಮೀನರಸಮ್ಮ ಎಂಬುವವಳು. ಕೌಶಲ್ಯಳ ಪತಿ ಬೆಂಗಳೂರಿನ ಕಾಲೇಜೊಂದರ ಅಧ್ಯಾಪಕ. ಕೌಶಲ್ಯಳ ತಂದೆ ವರದಕ್ಷಿಣೆ ನೀಡಲಿಲ್ಲವೆಂಬ ಕಾರಣಕ್ಕಾಗಿ ವಿಷವುಣಿಸಿ ಕೊಲೆಮಾಡಲಾಗಿದೆ. ಈ ಕೊಲೆಯಲ್ಲಿ ಕೌಶಲ್ಯಳ ಅತ್ತೆ ಮತ್ತು ಪತಿಯ ಕೈವಾಡವಿರುವುದಾಗಿ ಶಂಕಿಸಲಾಗಿದ್ದರೂ ಅವರಿಬ್ಬರನ್ನೂ ಇನ್ನೂ ಬಂಧಿಸಿಲ್ಲ.

ಇರುವ ಕೊಂಚ ಆಸ್ತಿ ಮಾರಿ ವರದಕ್ಷಿಣೆಕೊಟ್ಟು ತಮ್ಮ ಕರುಳುಕುಡಿಯನ್ನು ಅಮಾನುಷರ ಕೈಗೆ ಹಾಕಿ ಪರಿತಾಪಪಡುವ ಬದಲು ಹೆತ್ತವರು ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ ಅವರ ಭವಿಷ್ಯ ರೂಪಿಸಿಕೊಳ್ಳಲು ಅವರಿಗೇ ಬಿಡಬೇಕು.

ವರದಿ—ಎಲ್ಸಿ ನಾಗರಾಜ್

ನಾಗರಿಕ ಸಮಿತಿ

1-11-81ರಂದು (ರಾಜ್ಯೋತ್ಸವದ ದಿನ) ದ. ಕ. ಜಿಲ್ಲೆಯ ಜಪ್ಪಿನಮೊಗರು - ಕಂಕನಾಡಿ - ಬಜಾಲ್ ನಾಗರಿಕ ಸಮಿತಿಯು ಉದ್ಘಾಟಿಸಲ್ಪಟ್ಟಿತು. ಮೇಲ್ಕಾಣಿಸಿದ 3 ಗ್ರಾಮಗಳ ಗ್ರಾಮಸ್ಥರ ಏಳಿಗೆಗಾಗಿ ಶ್ರಮಿಸಲು ಈ ನಾಗರಿಕ ಸಮಿತಿ ನಿರ್ಧರಿಸಿದೆ. ಗ್ರಾಮದ ಏಳಿಗೆಗಾಗಿ ಸರಕಾರವನ್ನು ಅವಲಂಬಿಸುವುದು ಕಷ್ಟವಾದ್ದರಿಂದ ಗ್ರಾಮಸ್ಥರ ಸಹಕಾರದಿಂದ ಗ್ರಾಮಗಳ ಪುರೋಭಿವೃದ್ಧಿಗೆ ಕೆಲಸಮಾಡಲು ನಿರ್ಧರಿಸಿದೆ.

25ಜನರು ಕಾರ್ಯಕಾರಿ ಸಮಿತಿ ಸದಸ್ಯರಿರುವ ಈ ಸಮಿತಿಗೆ ಬಜಾಲ್ ಪಂಚಾಯತಿನ ಚೇರ್‌ಮನ್‌ರಾದ ಪ್ರೇಮ್‌ದಾಸ್ ಸುವರ್ಣರು ಅಧ್ಯಕ್ಷರಾಗಿ, ಜಪ್ಪಿನಮೊಗರು ಪಂಚಾಯತ್‌ನ ಮಾಜಿ ಚೇರಮನ್ ಸದಾಶಿವಶೆಟ್ಟರು ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ.

○

ನೇಕಾರ ಕಾರ್ಮಿಕರ ಬವಣೆ

ರಾಣಿಬೆನ್ನೂರು ನೇಕಾರ ಕಾರ್ಮಿಕರು ಮಾಲೀಕರ ದಬ್ಬಾಳಿಕೆಯಿಂದ ರೋಸಿ ಇತ್ತೀಚೆಗೆ ನೇಕಾರ ಕಾರ್ಮಿಕ ಸಂಘವನ್ನು ರಚಿಸಿಕೊಂಡಿದ್ದರು. ಸಂಘಟನೆ ಮಾಡಿಕೊಂಡ ಮೇಲಂತೂ ಮಾಲೀಕರ ಗೂಂಡಾಗಿರಿ ಉಲ್ಬಣಿಸಿದೆ. ಸೊಸಾಯಟಿಯ ಅವ್ಯವಹಾರ ಬಯಲಿಗೆಳೆದಿದ್ದಾಗಿ ಸಂಘದ ಪದಾಧಿಕಾರಿಗಳ ಮನೆಗಳ ಮೇಲೆ ದಾಳಿ ಮಾಡಿದ್ದರು. ಕಾರ್ಮಿಕಸಂಘದ ಕಾರ್ಯಕರ್ತರಾದ ದುರ್ಗಪ್ಪ ಮತ್ತು ಶೇಖಪ್ಪ ಇವರುಗಳನ್ನು ಥಳಿಸಿದ್ದಾರೆ.

ಮಾಲೀಕರ ಗೂಂಡಾಗಿರಿಯನ್ನು ಪ್ರತಿಭಟಿಸಿ ರಾಣಿಬೆನ್ನೂರಿನ ನೇಕಾರ ಕಾರ್ಮಿಕರು 26-11-81ರಿಂದ ಧರಣಿ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಅಂದು ದೊಡ್ಡ ಪ್ರಮಾಣದಲ್ಲಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆದವು. ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ವಿ. ಎನ್. ಹಳಕಟ್ಟಿ ಮತ್ತು ಹರಿಹರದ ಕಾರ್ಮಿಕರ ಧುರೀಣ ಕಾಂ. ಇಕ್ಬಾಲ್ ಹುಸೇನ್ ಮಾತನಾಡಿ ಮಾಲೀಕರ ಕುತಂತ್ರವನ್ನು ಖಂಡಿಸಿದ್ದಾರೆ.

○

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ರೈತ ಚಳುವಳಿಗೆ ಸಿ.ಐ.ಟಿ.ಯು. ಬೆಂಬಲ

ದಕ್ಷಿಣ ಕನ್ನಡ ಜಿಲ್ಲೆಯ ಭೂನ್ಯಾಯ ಮಂಡಳಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರೈತರು ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಅವರಿಂದ ಕಿತ್ತುಕೊಂಡು ಭೂಮಾಲೀಕರಿಗೆ ಕೊಡಲಾಗುತ್ತಿದೆ.

ಈ ಅನ್ಯಾಯಗಳ ವಿರುದ್ಧ ದ.ಕ. ಜಿಲ್ಲಾ ರೈತಸಂಘದ ನೇತೃತ್ವದಲ್ಲಿ ಸುಳ್ಯ ತಾಲ್ಲೂಕಿನಲ್ಲಿ ನವೆಂಬರ್ 3 ರಿಂದ ರೈತಚಳುವಳಿ ನಡೆಯುತ್ತಿದ್ದು, ನವೆಂಬರ್ 25ರಂದು ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಚೇರಿಗಳ ಮುಂದೆ ರೈತರ ಸತ್ಯಾಗ್ರಹ ನಡೆದಿದೆ.

ಸಿ. ಐ. ಟಿ. ಯು. ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಮುಹಸಬ್ಬ ಹೇಳಿಕೆಯೊಂದನ್ನು ಹೊರಡಿಸಿ ರೈತರ ನ್ಯಾಯಬದ್ಧ ಹೋರಾಟಕ್ಕೆ ಸಿ. ಐ. ಟಿ. ಯು. ಬೆಂಬಲಿಸುತ್ತದೆ ಎಂದಿದ್ದಾರೆ. ಜಿಲ್ಲೆಯ ಕಾರ್ಮಿಕರು ರೈತಹೋರಾಟದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಕರೆ ನೀಡಿದ್ದಾರೆ.

●

ಐಕ್ಯರಂಗ ಓದಿ

ನಿಮ್ಮ ಸ್ನೇಹಿತರಿಗೂ ಓದಿಸಿ

ಶಿವಮೊಗ್ಗ ಜಿಲ್ಲಾ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮ್ಮೇಳನದ ಪೂರ್ವಭಾವಿಯಾಗಿ ನವೆಂಬರ್ 17 ಮತ್ತು 18ರಂದು ಪಕ್ಷದ ಶಿವಮೊಗ್ಗ ಜಿಲ್ಲಾ ಸಮ್ಮೇಳನವು ಶಿವಮೊಗ್ಗದ ಸ್ಕೌಟ್ ಭವನದಲ್ಲಿ ನಡೆಯಿತು. ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಚಂದೂಕಂಟ್ಟಿಯವರು ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಮ್ಮೇಳನದ ಕಾರ್ಯಕಲಾಪ ನಡೆಸಲು ಕಾಂ. ಕೆ. ಎಂ. ಶ್ರೀನಿವಾಸ್, ಮೊಹಮ್ಮದ್ ಶಫೀ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಆಯ್ಕೆಮಾಡಲಾಯಿತು.

ಸಮ್ಮೇಳನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಪಿ. ರಾಮಚಂದ್ರರಾವ್ ಅವರು ಉದ್ಘಾಟಿಸಿದರು. ರಾಷ್ಟ್ರೀಯ, ಅಂತರಾಷ್ಟ್ರೀಯ ಪ್ರಸಕ್ತ ಪರಿಸ್ಥಿತಿಯನ್ನು ವಿಶ್ಲೇಷಿಸಿದ ಕಾಂ. ಪಿ. ಆರ್. ಅವರು ದೇಶದ ಜನತೆಯ ಸಮಸ್ಯೆಗಳ ಪರಿಹಾರಕ್ಕೋಸ್ಕರ ಅವಿರತ ಶ್ರಮಿಸಬೇಕು ಎಂದು ಕರೆ ನೀಡಿದರು.

ಆನಂತರ ಜಿಲ್ಲಾ ಕಾರ್ಯದರ್ಶಿ ಕಾಂ. ಚಂದೂಕಂಟ್ಟಿಯವರು ಪಕ್ಷದ ಚಟುವಟಿಕೆಗಳ ಕುರಿತಾದ ವರದಿ ಮಂಡಿಸಿದರು. ವರದಿ ಮೇಲೆ ಚರ್ಚೆ ನಡೆದು ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ನಂತರ ಜಿಲ್ಲಾ ಘಟಕಕ್ಕೆ ಕಾರ್ಯದರ್ಶಿಯಾಗಿ ಕಾಂ. ಚಂದೂಕಂಟ್ಟಿಯವರು ಪುನರಾಯ್ಕೆಯಾದರು. ಈ ಕೆಳಗಿನವರನ್ನು ನೂತನ ಜಿಲ್ಲಾ ಸಮಿತಿಗೆ ಆಯ್ಕೆಮಾಡಲಾಯಿತು: ಕಾಂ. ಎಸ್. ಬಿ. ಶಿವಶಂಕರ್, ಶಿರಂಕಾಸ್ತ, ಡಾಕ್ಟರ್ ಕೃಷ್ಣಾಜಿ, ಕೆ. ಎಂ. ಶ್ರೀನಿವಾಸ್, ರಾಘವೇಂದ್ರರಾವ್, ಕೊಲ್ಲೂರಯ್ಯ, ಎಸ್. ಎಚ್. ಸುಬ್ಬಯ್ಯ, ಕೆ. ನಾಗರಾಜ್, ನರಸಿಂಹಗೌಡ, ಮೊಹಮ್ಮದ್ ರಫಿ, ಸತ್ಯಪಾಲನ್ ಮತ್ತು ಕಾಂ. ಸುಕುಮಾರನ್ ಇವರುಗಳು.

ಮತ್ತು ಕಾಂ. ಚಂದೂಕಂಟ್ಟಿ, ಶಿವಶಂಕರ್, ಶ್ರೀನಿವಾಸ್ ಮತ್ತು ಕಾಂ. ನಾಗರಾಜ್ ಇವರನ್ನೊಳಗೊಂಡ ಜಿಲ್ಲಾ ಸೆಕ್ರೆಟಾರಿಯೇಟನ್ನು ಚುನಾಯಿಸಲಾಯಿತು. ಡಿಸೆಂಬರ್‌ನಲ್ಲಿ ಮಂಗಳೂರಿನಲ್ಲಿ ನಡೆಯಲಿರುವ ಪಕ್ಷದ ರಾಜ್ಯಸಮ್ಮೇಳನಕ್ಕೆ 8 ಜನ ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು.

ಬಹಿರಂಗ ಸಭೆ

ಸಮ್ಮೇಳನದ ಅಂಗವಾಗಿ ಎರಡನೆಯ ದಿನ (18-11-81) ಶಿವಮೊಗ್ಗದ ಗೋಪಿಸರ್ಕಲ್ ಬಳಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಚಂದೂಕಂಟ್ಟಿ ವಹಿಸಿದ್ದರು. ಸಭೆಯುನ್ನುದ್ದೇಶಿಸಿ ಕಾಂ. ಪಿ. ರಾಮಚಂದ್ರರಾವ್, ಕೆ. ಎಂ. ಶ್ರೀನಿವಾಸ್ ಮೊದಲಾದವರು ಮಾತನಾಡಿದರು. ಕೊನೆಯಲ್ಲಿ ಕಾಂ. ಗೋವಿಂದನ್ ವಂದಿಸಿದರು.

ಬೆಲೆಏರಿಕೆಯನ್ನು ತಡೆಗಟ್ಟಬೇಕೆಂಬ, ರೈತನು ಬೆಳೆದ ಬೆಳೆಗೆ ನ್ಯಾಯ ಬೆಲೆ ನಿಗದಿಮಾಡಬೇಕೆಂಬ, ಸಹಕಾರಿ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕೆಂಬ, ಆಗತ್ಯ ಸೇವಾ ನಿರ್ವಹಣೆ ಕಾನೂನನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

●

ಬೀಡಿ ಲೇಬರ್ ಯೂನಿಯನ್ ಸಭೆ

ದ. ಕ. ಜಿಲ್ಲೆಯ ಗುರುಪುರ ಸುರತ್ಕಲ್ ಪ್ರದೇಶದ ಬೀಡಿಲೇಬರ್ ಯೂನಿಯನ್‌ನ ಆಶ್ರಯದಲ್ಲಿ 30-11-81ರಂದು ಮುಳಲಿಪೇಟೆಯಲ್ಲಿ ಬಹಿರಂಗ ಸಭೆ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ತೆಂಕು ಉಳಿಪಾಡಿ ಗ್ರಾಮದ ಪ್ರಗಿನಮುವೆ ವಾಸುಗಟ್ಟಿಯವರು ವಹಿಸಿದ್ದರು.

ಯೂನಿಯನ್‌ನ ಕಾರ್ಯದರ್ಶಿ ಕಾಂ. ಎಂ. ಹೊನ್ನಯ್ಯನವರು ಸ್ವಾಗತಿಸಿದರು. ನಂತರ ಗುರುಪುರ ಸರ್ಕಲ್ ರೈತಸಂಘದ ಕಾರ್ಯದರ್ಶಿ ಕಾಂ. ಎ. ಎಸ್. ನಾರಾಯ್ಯನವರು ಮತ್ತು ಕೊಟೆಕಾರು ಸರ್ಕಲ್ ಬೀಡಿಲೇಬರ್ ಯೂನಿಯನ್ನಿನ ಕಾಂ. ಯು. ಬಿ. ಲೋಕಯ್ಯನವರು ಮಾತನಾಡಿ ಬೀಡಿ ಮಜೂರರ ಸಮಸ್ಯೆಯನ್ನು ವಿವರಿಸಿದರು.

ಕೊನೆಯಲ್ಲಿ ಕಾಂ. ಎಂ. ಪದ್ಮನಾಭರ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

●

ಸಾಹಿತ್ಯೇತರ ಹೋರಾಟವೂ ಬಂಡಾಯ ಸಾಹಿತ್ಯದ ಗುರಿ

ಕಲಬುರ್ಗಿ-ಬಂಡಾಯ ಸಾಹಿತ್ಯದ ಉದ್ದೇಶ ಕೇವಲ ವ್ಯವಸ್ಥೆಯನ್ನು ಟೀಕಿಸಿ ಸಾಹಿತ್ಯ ರಚನೆ ಮಾಡುವುದಕ್ಕಷ್ಟೆ ಸೀಮಿತವಾಗಿಲ್ಲ. ವ್ಯವಸ್ಥೆಯನ್ನು ಬದಲಾಯಿಸಲು ಅಗತ್ಯವಾದ ಎಲ್ಲಾ ಬಗೆಯ ಸಾಹಿತ್ಯೇತರ ಹೋರಾಟಗಳಲ್ಲೂ ಅದು ಪಾಲುಗೊಳ್ಳುತ್ತದೆ ಎಂದು ಕಲಬುರ್ಗಿ ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ಸಂಚಾಲಕ ವೀರಸ್ವಾಮಿ ಅವರು ದಿ. 14ರಂದು ತಿಳಿಸಿದರು.

ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಹೆಚ್ಚೆಚ್ಚು ಜನರು ಪಾಲುಗೊಳ್ಳುವಂತೆ ಪ್ರಯತ್ನಿಸುವುದಕ್ಕಾಗಿ ಇಲ್ಲಿನ ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟಿನಲ್ಲಿ ಏರ್ಪಡಿಸಿದ್ದ ಸಾಹಿತ್ಯಾಸಕ್ತರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು "ಬಂಡಾಯ ಸಾಹಿತಿಗಳಿಗೆ ಸ್ವಯಂ ಸಂತುಷ್ಟಿ ಸಮಾಧಾನಕ್ಕಾಗಿ ಸಾಹಿತ್ಯ ರಚನೆ ಮಾಡುವುದಕ್ಕಿಂತ ಸಾಮಾಜಿಕ ಕಾಳಜಿ ಹಾಗೂ ರಾಜಕೀಯ ಪ್ರಜ್ಞೆ ಬೆಳೆಸುವುದೇ ತುರ್ತು ಅಗತ್ಯವಾಗಿದೆ" ಎಂದು ಅವರು ಸ್ಪಷ್ಟಪಡಿಸಿದರು.

ಬಂಡಾಯ ಸಾಹಿತ್ಯದ ಸ್ವರೂಪ ಹಾಗೂ ಧೋರಣೆಗಳ ಬಗ್ಗೆ ಮಾತನಾಡಿದ ತರುಣ ಸಾಹಿತಿ ಸೂಗಯ್ಯ ಹಿರೇಮಠ ಅವರು ಪಂಪನಿಂದ ನವೋದಯದವರೆಗಿನ ಒಟ್ಟು ಸಾಹಿತ್ಯ ಸೃಷ್ಟಿಯನ್ನು ಹಿಂಜಿಹಿಂಜಿ ವಿಮರ್ಶೆಗೊಳಪಡಿಸಿ ಅದರಲ್ಲಿನ ಯಜಮಾನ ಸಂಸ್ಕೃತಿಯ ಸ್ವರೂಪವನ್ನು ತಿಳಿಸಿ ಇದರ ಹಿನ್ನೆಲೆಯಲ್ಲಿ ಬಂಡಾಯ ಸಾಹಿತ್ಯ ಹುಟ್ಟಿಕೊಳ್ಳಬೇಕಾದ ಅನಿವಾರ್ಯವನ್ನು ಪ್ರಬಲವಾಗಿ ಸಮರ್ಥಿಸಿಕೊಂಡರು.

ಇವರಿಬ್ಬರ ಭಾಷಣದ ತರುವಾಯ ಬಂಡಾಯ ಸಾಹಿತ್ಯದ ಬಗೆಗೆ ಸುಮಾರು ಎರಡು ಗಂಟೆ ಕಾಲ ವ್ಯಾಪಕವಾದ ಪ್ರಶ್ನೋತ್ತರ ರೂಪದ ಚರ್ಚೆ ನಡೆಯಿತು. ಚರ್ಚೆಯಲ್ಲಿ ಭಾಗವಹಿಸಿದ ಸಾಹಿತ್ಯಾಸಕ್ತರ ಪ್ರಶ್ನೆಗಳಿಗೆ ಬಂಡಾಯ ಸಾಹಿತ್ಯದ ಪರವಾಗಿ ವೀರಸ್ವಾಮಿ, ಸೂಗಯ್ಯ ಹಿರೇಮಠ, ಮಂಗ್ಳೂರ್ ವಿಜಯ, ಆರ್. ಕೆ. ಹುಡಗಿ, ಬಸಣ್ಣಸಿಂಘೆ, ಎಸ್. ಜಿ. ನಾಟೀಕಾರ್ ಅವರು ಉತ್ತರ ನೀಡಿದರು. ಬಂಡಾಯದ ಸ್ವರೂಪ ಮತ್ತು ಧೋರಣೆಗಳನ್ನು ಸ್ಪಷ್ಟವಾಗಿ ಮನವರಿಕೆ ಮಾಡಿಕೊಂಡ ಹಲವಾರು ಸಾಹಿತ್ಯಾಸಕ್ತರು ಆಗಲೇ ಬಂಡಾಯ ಸಾಹಿತ್ಯ ಸಂಘಟನೆಯ ಸದಸ್ಯರಾದರು.

ಪ್ರಾರಂಭದಲ್ಲಿ ಮಂಗ್ಳೂರ್ ವಿಜಯ, ಯಮುನಪ್ಪ ಬಳಗದವರು ಕ್ರಾಂತಿಗೀತೆ ಹಾಡಿದರು. ಆರ್. ಕೆ. ಹುಡಗಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕೊನೆಯಲ್ಲಿ ಬಸವಣ್ಣ ಸಿಂಘೆ ವಂದನಾರ್ಪಣೆ ಮಾಡಿದರು. ●

ಮೈಸೂರು ಜಿಲ್ಲಾ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮ್ಮೇಳನವು ನವೆಂಬರ್ 8ರಂದು ನಡೆಯಿತು. ಕಾಂ. ಎನ್. ಎಸ್. ಪ್ರಭಾಕರ್, ಕಾಂ. ಶೇಖರ್, ಕಾಂ. ತಿಮ್ಮೇಗೌಡರಿರುವ ಅಧ್ಯಕ್ಷ ಮಂಡಲಿಯನ್ನು ಆರಿಸಲಾಯಿತು. ಕಾಂ. ಎ. ಬಾಲಸುಬ್ರಮಣ್ಯಂ ಹಾಗೂ ಇತರ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಮ್ಮೇಳನವನ್ನು ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಉದ್ಘಾಟಿಸಿದರು. ಕಳೆದ ಸಮ್ಮೇಳನದ ನಂತರ ಅಂತರರಾಷ್ಟ್ರೀಯ, ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಆಗಿರುವ ಬೆಳವಣಿಗೆಗಳನ್ನು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿಶ್ಲೇಷಿಸಿದ ಕಾಂ. ಎಂ. ಕೆ. ಯವರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವಿಚಾರಗಳನ್ನು ನಮ್ಮ ಪಕ್ಷ ತೆಗೆದುಕೊಂಡ ನಿಲುವು ಸರಿಯಾದುದು ಎಂದು ಚರಿತ್ರೆ ತೋರಿಸಿಕೊಟ್ಟಿದೆ ಎಂದರು. ಕರ್ನಾಟಕದಲ್ಲಿ ರಾಜ್ಯಸಮಿತಿಯ ಪುನರ್‌ಸಂಘಟನೆಯಾದ 3-4 ವರ್ಷಗಳಲ್ಲಿ ನಮ್ಮ ಚಟುವಟಿಕೆಗಳು ಹೆಚ್ಚಾಗಿವೆ. ಟ್ರೇಡ್‌ಯೂನಿಯನ್‌ಗಳು ಹಾಗೂ ನಮ್ಮ ಸಾಮೂಹಿಕ ಸಂಘಟನೆಗಳು ಸ್ವತಂತ್ರವಾಗಿ ಮತ್ತು ಜಂಟಿಯಾಗಿ ಅನೇಕ ಹೋರಾಟಗಳನ್ನು ನಡೆಸಿವೆ. ಪರಿಣಾಮವಾಗಿ ನಮ್ಮ ಚಟುವಟಿಕೆ ಎಲ್ಲ ವಿಭಾಗಗಳಿಗೂ ವಿಸ್ತರಿಸಿದೆ. ಆದರೆ ನಾವು ಬೆಳೆಯಬೇಕಾದಷ್ಟು ಬೆಳೆದಿಲ್ಲ. ಪಕ್ಷವನ್ನು ಕ್ರಾಂತಿಕಾರಿ ಸಾಮೂಹಿಕ ಪಕ್ಷವನ್ನಾಗಿ ಬೆಳೆಸಲು ನಮ್ಮ ಬಲಹೀನತೆಗಳನ್ನು ನಿವಾರಿಸಿಕೊಂಡು ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳೆ, ಬುದ್ಧಿಜೀವಿಗಳ ಮಧ್ಯೆ ನಮ್ಮ ಚಟುವಟಿಕೆಗಳು ಹೆಚ್ಚಾಗಬೇಕಾಗಿದೆ ಎಂದು ತಿಳಿಸಿದರು.

ಸಂಘಟನಾ ಸಮಿತಿ ಕಾರ್ಯದರ್ಶಿ ಕಾಂ. ಎಂ. ಎನ್. ಉಗ್ರಪ್ಪ ವರದಿ ಮಂಡಿಸಿದರು. ಏಳು ಜನ ಪ್ರತಿನಿಧಿಗಳು ವರದಿ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು. ವರದಿ ಸರ್ವಾನುಮತದಿಂದ ಅಂಗೀಕೃತವಾಯಿತು.

ಕಾಂ. ಎಂ. ಎನ್. ಉಗ್ರಪ್ಪ ಕಾರ್ಯದರ್ಶಿಯಾಗಿ, ಕಾಂ. ಮೋಹನ್ ಕುಮಾರ್, ಕಾಂ. ಪ್ರಭಾಕರ್, ಕಾಂ. ತಿರುಮಲಾಚಾರ್, ಕಾಂ. ತಿಮ್ಮೇಗೌಡ, ಕಾಂ. ಚಿಕ್ಕಲಿಂಗಯ್ಯ ಸದಸ್ಯರಿರುವ ಪ್ರಾದೇಶಿಕ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅನೇಕ ಆಪಾದನೆಗಳಿಗೆ ಒಳಗಾಗಿರುವ ಗುಂಡೂರಾವ್ ಸರಕಾರ ರಾಜೀನಾಮೆ ಕೊಡಬೇಕು; ನಗರ ಕಾರ್ಪೋರೇಷನ್‌ಗಳಿಗೆ ಚುನಾವಣೆ ನಡೆಸಬೇಕು; ಅಗತ್ಯವಸ್ತುಗಳ ಪಡಿತರ ಪದ್ಧತಿಯನ್ನು ಸರಿಪಡಿಸಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನವು ತೆಗೆದುಕೊಂಡಿತು.

○

ಮೋಹನ್ ಪುನೀಮಿಯಾರ್ ಉಚ್ಚಾಟನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯ ಸದಸ್ಯರೂ, ಪಕ್ಷದ ರಾಜಸ್ತಾನ ಘಟಕದ ಕಾರ್ಯದರ್ಶಿಗಳೂ ಆದ ಮೋಹನ್ ಪುನೀಮಿಯಾರನ್ನು ಪಕ್ಷದಿಂದ ಉಚ್ಚಾಟಿಸಿರುವುದಾಗಿ (Expulsion) ಪೊಲಿಟ್ ಬ್ಯೂರೋ ತಿಳಿಸಿದೆ. ಈ ಕುರಿತು 17-11-81ರಂದು ಪಿ. ಬಿ. ಪತ್ರಿಕಾ ಹೇಳಿಕೆ ಹೊರಡಿಸಿದೆ.

ಮೋಹನ್ ಪುನೀಮಿಯಾರ ಪಕ್ಷ ವಿರೋಧಿ ಚಟುವಟಿಕೆಗಳ ಕುರಿತು ಅಕ್ಟೋಬರ್ 27ರಂದು ನಡೆದ ಕೇಂದ್ರಸಮಿತಿಯ ಸಭೆಯಲ್ಲಿ ಚರ್ಚಿಸಲಾಗಿತ್ತು. ಪಿ. ಬಿ. ತೆಗೆದುಕೊಳ್ಳುವ ಕ್ರಮ (ಉಚ್ಚಾಟನೆಯೂ ಸೇರಿ) ಕ್ಕೆ ಒಪ್ಪಿಗೆ ಸೂಚಿಸಲಾಗಿತ್ತು.

ಇದರೊಟ್ಟಿಗೆ ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ನಿರತರಾಗಿದ್ದ, ಪಕ್ಷದ ಶಿಸ್ತನ್ನು ಉಲ್ಲಂಘಿಸಿರುವ ಪಿ. ಎನ್. ಧಂಡಾ, ವಿಜಯಶಂಕರ್ ಶುಕ್ಲಾ ಇವರುಗಳನ್ನು ಪಕ್ಷದಿಂದ ಉಚ್ಚಾಟಿಸಿರುವುದಲ್ಲದೇ ಕೋಟಾ ಜಿಲ್ಲಾ ಸಮಿತಿಯನ್ನು ವಿಸರ್ಜಿಸಲಾಗಿದೆ.

ಪೊಲಿಟ್‌ಬ್ಯೂರೋ ತನ್ನ ಹೇಳಿಕೆಯಲ್ಲಿ ಮೋಹನ್ ಪುನೀಮಿಯಾ ಮತ್ತವರ ಗುಂಪಿನ ಚಟುವಟಿಕೆಗಳ ವಿರುದ್ಧ ಹೋರಾಡಬೇಕೆಂದು ಪಕ್ಷದ ರಾಜಸ್ತಾನದ ಸಂಗಾತಿಗಳಿಗೆ ಕರೆ ನೀಡಿದೆ.

ಡಿ.ವೈ.ಎಫ್.ಐ. ಸ್ಥಾಪನಾ ದಿನಾಚರಣೆ

ಭಾರತ ಪ್ರಜಾಸತ್ತಾತ್ಮಕ ಯುವ ಫೆಡರೇಷನ್ನಿನ ಸ್ಥಾಪನಾ ದಿನಾಚರಣೆಯ ಅಂಗವಾಗಿ 12-11-81 ಧಾರವಾಡ ಜಿಲ್ಲಾ ಘಟಕದ ಆಶ್ರಯದಲ್ಲಿ ಸತ್ತೂರಿನಲ್ಲಿ ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಡಿ. ವೈ. ಎಫ್. ಐ. ಘಟಕದ ಅಧ್ಯಕ್ಷ ಜೆ. ಸಿ. ಮಾಳಿ, ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ಘಟಕದ ಅಧ್ಯಕ್ಷ ವಿ. ಜಿ. ಕಮ್ಮಾರ, ವಿ. ಎನ್. ಹಳಕಟ್ಟಿ ಮತ್ತು ಎಂ. ಬಿ. ಕಟ್ಟಿ ಆಗಮಿಸಿದ್ದರು. ಆರಂಭದಲ್ಲಿ ಅಣ್ಣಾರಾಯ ಈಟಿಗೇರ್ ಸ್ವಾಗತಿಸಿದರು. ಕೊನೆಯಲ್ಲಿ ಜಿ. ಕೆ. ಚೆನ್ನಬಸವಣ್ಣ ವಂದಿಸಿದರು.

○

ಕೋಲಾರ ಜಿಲ್ಲಾ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮ್ಮೇಳನದ ಪೂರ್ವಭಾವಿಯಾಗಿ ಡಿಸೆಂಬರ್ 5 ಮತ್ತು 6ರಂದು ಕೆ. ಜಿ. ಎಫ್ ನಲ್ಲಿ ಕೋಲಾರ ಜಿಲ್ಲಾ ಸಮ್ಮೇಳನವು ನಡೆಯಿತು. ಆರಂಭದ ದಿನ ಕಾಂ. ಶೌರಿದಾಸ್‌ರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನವು ಆರಂಭವಾಯಿತು.

ಸಮ್ಮೇಳನವನ್ನು ಉದ್ಘಾಟಿಸಿದ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಸೂರ್ಯನಾರಾಯಣ ರಾವ್ ಅವರು ಮಾತನಾಡುತ್ತಾ ದೇಶದಲ್ಲಿ ತಲೆಎತ್ತುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ಕುರಿತು ವಿವರಿಸಿ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಸಾಮ್ರಾಜ್ಯಶಾಹಿಗಳಿಂದ ಬಂದಿರುವ ಅಪಾಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಿಳಿಸಿದರು. ಕಾಂಗ್ರೆಸ್ ಸರಕಾರದ ಧೋರಣೆಗಳಿಂದ ಬಳಲಿರುವ ಜನತೆಯನ್ನು ಸಂಘಟಿಸಿ ಹೋರಾಟಕ್ಕಿಳಿಸುವ ಮಹತ್ತರ ಹೊಣೆ ಪಕ್ಷದ ಮೇಲಿದೆ ಎಂದು ಕಾಂ. ಸೂರ್ಯನಾರಾಯಣರಾವ್ ತಿಳಿಸಿದರು.

ನಂತರ ಪಕ್ಷದ ಕಾರ್ಯದರ್ಶಿ ಕಾಂ. ಜೆ. ದೊರೆಸ್ವಾಮಿಯವರು ಸಮ್ಮೇಳನಕ್ಕೆ ವರದಿ ಒಪ್ಪಿಸಿದರು. ವರದಿ ಮೇಲೆ ನಡೆದ ಚರ್ಚೆಯಲ್ಲಿ 10 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನದ ಎರಡನೆಯ ದಿನ ಕೆಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು : ಊಳಿನೋಣದ ಹಾವಳಿಗೆ ಸೂಕ್ತ ಕ್ರಮಕೈಗೊಳ್ಳಬೇಕೆಂದು, ನಿರುದ್ಯೋಗಿಗಳಿಗೆ ನಿರುದ್ಯೋಗ ಪರಿಹಾರ ನೀಡಬೇಕೆಂದು, ಕೂಡಲೇ ಪುರಸಭಾ ಚುನಾವಣೆಗಳನ್ನು ನಡೆಸಬೇಕೆಂದು, ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ರೈತಸಂಘದ ಪ್ರತಿನಿಧಿಗಳಿಗೆ ಭೂನ್ಯಾಯಮಂಡಳಿಗಳಲ್ಲಿ ಪ್ರಾತಿನಿಧ್ಯ ವಿರಬೇಕೆಂದು ಒತ್ತಾಯಿಸುವ ಸಮ್ಮೇಳನವು ಬಂಜರು ಮತ್ತು ಮರಗಿಡಗಳಿಲ್ಲದ ಅರಣ್ಯ ಭೂಮಿಯನ್ನು ಭೂಹೀನ ಕೃಷಿಕಾರ್ಮಿಕರಿಗೆ ವಿತರಣೆ ಮಾಡಬೇಕೆಂದು ಒತ್ತಾಯಿಸಿದೆ.

1982 ಜನವರಿಯಲ್ಲಿ ಸಿ.ಪಿ.ಐ. (ಎಂ) ಮತ್ತು ಸಿ. ಪಿ. ಐ. ಜೊತೆಗೂಡಿ ಬೆಂಗಳೂರಿನಲ್ಲಿ ರಾಜಕೀಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಿರುವುದನ್ನು ಸಮ್ಮೇಳನ ಸ್ವಾಗತಿಸಿದೆ.

ನಂತರ ಕಾಂ. ಜೆ. ದೊರೆಸ್ವಾಮಿಯವರು ಕಾರ್ಯದರ್ಶಿಯಾಗಿರುವ, ಕಾಂ. ಲಕ್ಷ್ಮಣರೆಡ್ಡಿ ಸಹಕಾರ್ಯದರ್ಶಿಯಾಗಿರುವ ಜಿಲ್ಲಾ ಸಮಿತಿಯೊಂದನ್ನು ರಚಿಸಲಾಯಿತು. ಜಿಲ್ಲಾ ಸಮಿತಿ ಸದಸ್ಯರುಗಳಾಗಿ ಕಾಂ. ಅಬ್ದುಲ್ ಮಜೀದ್, ಕೆ. ಎಂ. ವೆಂಕಟೇಶ್, ರಾಜಣ್ಣ ಎಸ್. ಲಕ್ಷ್ಮಯ್ಯ, ಎಸ್. ಶೌರೀದಾಸ್, ಟಿ. ಎಸ್. ಮಣಿ, ಕಾಂ. ತಾರಾನಾಥ ಆಯ್ಕೆಯಾದರು.

ಎರಡು ದಿನಗಳ ಸಮ್ಮೇಳನದ ಕಲಾಪಗಳನ್ನು ಕಾಂ. ಲಕ್ಷ್ಮಣರೆಡ್ಡಿ, ಎಸ್. ಲಕ್ಷ್ಮಯ್ಯ ಮತ್ತು ಕಾಂ. ಟಿ. ಎಸ್. ಮಣಿ ಇವರುಗಳಿರುವ ಅಧ್ಯಕ್ಷ ಮಂಡಳಿ ನಿರ್ವಹಿಸಿತು.

ಬಹಿರಂಗ ಸಭೆ

ಸಮ್ಮೇಳನದ ಅಂಗವಾಗಿ ಕೊನೆಯ ದಿನ (ಡಿ. 6) ಕೆ. ಜಿ. ಎಫ್.ನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ತಮಿಳ್ನಾಡು ವಿಧಾನಸಭಾ ಸದಸ್ಯರೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರೂ ಆದ ಕಾಂ. ವಿ.ಪಿ. ಚಿಂತನ್, ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ಟಿ. ಎಸ್. ಮಣಿ ಮಾತನಾಡಿದರು.

ಮುಖಾಮುಖಿ

ಬರಡು ಭೂಮಿಯ ಮೇಲೆ ಗುಡಿಸಲುಗಳ ಸಾಲು
ಗುಡಿಸಲುಗಳ ಒಡಲೊಳಗೆ ಬಡತನದ ಬೆಂಕಿ
ದಹದಹಿಸುವ ಹಸಿವಿನಲಿ ಮುದುಡಿದ ಮನಸುಗಳು
ಯಜಮಾನರ ಎಕ್ಕಡದಡಿ ಸಿಲುಕಿದ ಕನಸುಗಳು
ತಲೆಮಾರುಗಳ ನೋವುಗಳು ಭುಗಿಲೆದ್ದಿತು ಜ್ವಾಲೆ
ಕಪ್ಪಗಿನ ಮುಖಗಳಲಿ ಕಣ್ಣುಗಳು ಕೆಂಪು
ನೂರು ಕಣ್ಣುಗಳಿಂದ ಭುಗಿಲೆದ್ದಿತು ಜ್ವಾಲೆ
ಕುಡುಗೋಲುಗಳಿಗೆ ಹೊಯ್ದಾಡುವ ಕಡಲ ಅಲೆಗಳ ರೊಚ್ಚು
ಬೆಂಜುಕಾರಿನಲಿ ಕುಲುಕಾಡುವ ಬೂರ್ಜ್ವಾ ಮೈಗಳಿಗೆ ಈಗ ಕಂಪನ
ಕಬ್ಬಿಣದ ಬೇಲಿಯೊಳಗೆ ಸೌಧಗಳು ಅದುರುತಿವೆ
ಬಂದೂಕುಗಳಿಗೆ ಮೂಡಿದವು ಬುಲೆಟ್ಟಿನ ಹಲ್ಲುಗಳು
ಹಣವಂತರ ಕ್ರೌರ್ಯಕ್ಕೆ ರೈತಮಕ್ಕಳ ಬಲಿದಾನ
ಗನ್ನುಗಳ ಲಾಟಿಬೂಟುಗಳ ಬೆಟಾಲಿಯನ್ನುಗಳು ಒಂದೆಡೆ
ಗುಡಿಸಲುಗಳು ಕುಡುಗೋಲುಗಳು
ನೇಗಿಲುಗಳ ಹೊತ್ತ ಹೆಗಲುಗಳು ಇನ್ನೊಂದೆಡೆ
ಕಣ್ಣೀರ ಓಕುಳಿಗೆ ಆಹ್ವಾನಿಸುತ್ತ ನಿಂತಿವೆ
ಮುಖಾಮುಖಿ

-ಪ್ರಮೋದ್

ಸಾದರ ಸ್ವೀಕಾರ

1) ವೋಲ್ಗಾ-ಗಂಗಾ (ದ್ವಿತೀಯ ಮುದ್ರಣ) :- ಲೇ: ರಾಹುಲ ಸಾಂಕೃತ್ಯಾಯನ ; ಅನು : ಬಿ. ಎಂ. ಶರ್ಮಾ; ಪುಟ : 408; ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಬೆಂಗಳೂರು ; ಬೆಲೆ : 20 ರೂ.

2) ಚಿರಸ್ಮರಣೆ (ತೃತೀಯ ಮುದ್ರಣ) :- ಲೇ : ನಿರಂಜನ ; ಪುಟ : 274 ; ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಬೆಂಗಳೂರು ; ಬೆಲೆ : 15 ರೂ.

3) ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ:- ಲೇ: ಎಂಗೆಲ್ಸ್; ಅನು: ಗೋಪಾಲಕೃಷ್ಣರಾವ್; ಬೆಲೆ: 3ರೂ; ಪ್ರಕಾಶಕರು : ಪ್ರಗತಿ ಪ್ರಕಾಶನ, ಮಾಸ್ಕೋ.

4) ಕೂಲಿ, ಬೆಲೆ ಮತ್ತು ಲಾಭ :- ಲೇ : ಕಾರ್ಲ್ ಮಾರ್ಕ್ಸ್ ; ಅನು : ಗೋಪಾಲಕೃಷ್ಣರಾವ್ ; ಪುಟ 84; ಬೆಲೆ : 5ರೂ. ಪ್ರಕಾಶಕರು : ಪ್ರಗತಿ ಪ್ರಕಾಶನ, ಮಾಸ್ಕೋ.

5) ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ 1857-59 :- ಲೇ : ಮಾರ್ಕ್ಸ್ ಮತ್ತು ಎಂಗೆಲ್ಸ್ ; ಅನು : ಗೋಪಾಲಕೃಷ್ಣರಾವ್ ; ಪುಟ : 84; ಬೆಲೆ : 2 ರೂ; ಪ್ರಕಾಶಕರು : ಪ್ರಗತಿ ಪ್ರಕಾಶನ, ಮಾಸ್ಕೋ.

6) ಮಹಿಳೆಯರ ವಿಮೋಚನೆಯ ಕುರಿತು :- ಲೇ : ಲೆನಿನ್ ; ಅನು : ಗೋಪಾಲಕೃಷ್ಣರಾವ್; ಪುಟ : 170; ಬೆಲೆ : 0-75 ಪೈಸೆ; ಪ್ರಕಾಶಕರು : ಪ್ರಗತಿ ಪ್ರಕಾಶನ, ಮಾಸ್ಕೋ.

7) ಕಾರ್ಲ್ ಮಾರ್ಕ್ಸ್ ಮತ್ತು ಅವರ ಬೋಧನೆ :- ಲೇ: ಲೆನಿನ್; ಅನು : ಗೋಪಾಲಕೃಷ್ಣರಾವ್; ಪುಟ : 88 ; ಬೆಲೆ : 1ರೂ; ಪ್ರಕಾಶಕರು : ಪ್ರಗತಿ ಪ್ರಕಾಶನ, ಮಾಸ್ಕೋ.

8) ಸೋವಿಯತ್ ಒಕ್ಕೂಟ – ಪ್ರಶ್ನೋತ್ತರಗಳು :- ಅನು : ಉಮಾಪತಿ ; ಪುಟ : 254 ; ಬೆಲೆ : 3-50 ರೂ; ಪ್ರಕಾಶಕರು : ಪ್ರಗತಿ ಪ್ರಕಾಶನ, ಮಾಸ್ಕೋ.

ಈ ಮೇಲ್ಕಾಣಿಸಿದ ಪುಸ್ತಕಗಳ ಕುರಿತು ವಿಮರ್ಶೆಯನ್ನು ಕಾಲಾನುಕ್ರಮದಲ್ಲಿ ಪ್ರಕಟಿಸಲಾಗುವುದು.

ಪ್ರತಿಭಟನೆ

4-12-81ರಂದು ತುಮಕೂರಿನ ಸರಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿನ ಕ್ಯಾಂಟೀನಿನ ಅವ್ಯವಸ್ಥೆ, ಅಶುಚಿ ಕುರಿತು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ.ಗಳು ಜಂಟಿಯಾಗಿ ವಹಿಸಿದ್ದವು.

ದುರಹಂಕಾರದಿಂದ ವರ್ತಿಸುವ ಕ್ಯಾಂಟೀನಿನ ಮಾಲೀಕನ ಮೇಲೆ ಕೂಡಲೇ ಕ್ರಮಕೈಗೊಳ್ಳಬೇಕೆಂದು ಪ್ರಿನ್ಸಿಪಾಲರನ್ನು ವಿದ್ಯಾರ್ಥಿಗಳು ಒತ್ತಾಯಿಸಿದರಲ್ಲದೇ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ನಗರ ಆರೋಗ್ಯ ಅಧಿಕಾರಿಗೂ ಮನವಿ ಸಲ್ಲಿಸಿದರು.

ಕ್ಯಾಂಟೀನನ್ನು ಶುಚಿಯಾಗಿಡಲು ಕ್ರಮತೆಗೆದುಕೊಳ್ಳಲಾಗುವುದೆಂಬ ಭರವಸೆಯನ್ನು ಪ್ರಿನ್ಸಿಪಾಲರು ಮತ್ತು ಆರೋಗ್ಯ ಅಧಿಕಾರಿಗಳು ವಿದ್ಯಾರ್ಥಿ ಮುಖಂಡರಿಗೆ ನೀಡಿದರು.

ಎಸ್.ಎಫ್.ಐ. ಸಭೆ

5-11-81ರಂದು ಎಸ್. ಎಫ್. ಐ.ನ ಸುರಪುರ ತಾಲ್ಲೂಕು ಸಭೆ ಸುರಪುರದಲ್ಲಿ ನಡೆಯಿತು. ಸಭೆಗೆ ಎಸ್. ಎಫ್. ಐ. ಪ್ರಧಾನಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಆಗಮಿಸಿ ಎಸ್. ಎಫ್. ಐ. ಧ್ಯೇಯ ಧೋರಣೆಗಳನ್ನು ಕುರಿತು ವಿವರಿಸಿದರು.

ಸುರಪುರ ತಾಲ್ಲೂಕು ಘಟಕಕ್ಕೆ ಈ ಕೆಳಗಿನವರನ್ನೊಳಗೊಂಡ ನೂತನ ಸಮಿತಿ ರಚಿಸಲಾಯಿತು.

ಅಧ್ಯಕ್ಷರಾಗಿ ಲಕ್ಷ್ಮಯ್ಯಕಲಾಲ್, ಉಪಾಧ್ಯಕ್ಷರಾಗಿ ಈಶ್ವರ, ಪ್ರಧಾನ ಕಾರ್ಯದರ್ಶಿಯಾಗಿ ಪುರುಷೋತ್ತಮ ಪತ್ತಾರ, ಸಹಕಾರ್ಯದರ್ಶಿಯಾಗಿ ಸತ್ಯನಾರಾಯಣ ಕುಲಕರ್ಣಿ, ಖಜಾಂಚಿಯಾಗಿ ಡಿ. ವೈ. ಗುಂಡಿ ಇವರುಗಳು ಆಯ್ಕೆಯಾಗಿದ್ದಾರೆ.

ಸಿ. ಐ. ಟಿ. ಯು. ರಾಜ್ಯ ಮಂಡಳಿಯ ಸದಸ್ಯರ ಗಮನಕ್ಕೆ

ಸಿ.ಐ.ಟಿ.ಯು. ರಾಜ್ಯಮಂಡಳಿಯ ಸಭೆಯು 15-12-1981 ರಂದು ಮಧ್ಯಾಹ್ನ 3 ಗಂಟೆಗೆ ಮಂಗಳೂರಿನ ಬೋಳಾರದಲ್ಲಿರುವ ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ಆಫೀಸಿನಲ್ಲಿ ನಡೆಯುತ್ತದೆ. ಸಭೆಯ ನೋಟೀಸನ್ನು ಸದಸ್ಯರೆಲ್ಲರಿಗೂ ಅಂಚೆಯ ಮೂಲಕ ಕಳುಹಿಸಲಾಗಿದೆ. ರಾಜ್ಯಮಂಡಳಿಯ ಸದಸ್ಯರೆಲ್ಲರೂ ತಪ್ಪದೆ ಸಭೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯಮಂಡಳಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT